ಅಪರಂಜಿ

ಫೆಬ್ರವರಿ
1995

ತಿಳಿನಗೆಯ ಕಾರಂಜಿ



* ಪ್ರಕಾಶ್
* ಕೆ. ವಿ. ಶ್ರೀನಾಥ್
* ಶಿವರಾಮ ಕಾರಂತ
* ಶಿವು
* ಹಾ. ರಾ.
* ಎಂ. ಎಸ್. ಕೆ.
* ಚಂಚಲಾ ಶ್ರೀಕಂಠಯ್ಯ, ಸುರತ್ಕಲ್
* ಎಸ್. ಪಾಲಪ್ಪ
* ಬಿ. ನಂಜುಂಡಯ್ಯ
* ಕಮಲಾರಾಮಸ್ವಾಮಿ
* ಅರುಣಾ ಆರ್. ಕಾರಂತ
* ಶಂಸ

ಬಿಡಿ ಪ್ರತಿ: 2 ರೂ. 50 ಪೈ.

ಸಂಪುಟ ೧೨ ಫೆಬ್ರವರಿ ೧೯೯೫ ಸಂಚಿಕೆ ೫

ಈ ಸಂಚಿಕೆಯಲ್ಲಿ

ಗೌರವ ಸಲಹೆಗಾರರು :
ಶ್ರೀ ಅ. ರಾ. ಸೇ.
ಶ್ರೀ ಶೇಷಗಿರಿ

ಸಂಪಾದಕ :
ಶಿವಕುಮಾರ್

ಚಂದಾ ವಿವರ :
ಬಿಡಿ ಪ್ರತಿ :
2 ರೂ 50 ಪೈಸೆ
ವಾರ್ಷಿಕ ಚಂದಾ
25 ರೂ.

ಆಜೀವ ಚಂದಾ :
250 ರೂ.

ವಿಳಾಸ :
ಅಪರಂಜಿ ಕಾರ್ಯಾಲಯ
36, 6ನೆಯ ಮುಖ್ಯ ರಸ್ತೆ
ಮಲ್ಲೇಶ್ವರಂ
ಬೆಂಗಳೂರು 560 003

ಕೆಲಸದ ವೇಳೆ :
ಬೆಳಗ್ಗೆ 8 ರಿಂದ
10 ಗಂಟೆಯುವರೆಗೆ

ಮುದ್ರಣ : ಇಂಪ್ರೆಶನ್ಸ್, ಮಲ್ಲೇಶ್ವರಂ, ಬೆಂಗಳೂರು - 560 003

ಅಪರಂಜಿ

(ತಿಳಿನಗೆಯ ಕಾರಂಜಿ)

ಸಂಪುಟ ೧೨ ಫೆಬ್ರುವರಿ ೧೯೯೫ ಸಂಚಿಕೆ ೫

'ವಿತ್ತದಿಂದ ಅಮೃತತ್ವದ ಆಶೆಯಿಲ್ಲ'
'ಅಂತಹ ವಿತ್ತದಿಂದ ನನಗೇನು ?

–ಬೃಹದಾರಣ್ಯಕ

ಜನತೆಯ ಭಾಗ್ಯವು ಘನೀಕೃತವಾದಾಗ ಒಬ್ಬನು ಶಾಸಕನಾಗುವನು. ಅದು ಭೂರಿ ಭಾಗ್ಯವಾಗಿದ್ದಾಗ ಅವನು ಮಂತ್ರಿಯಾಗುವನು, ನಿಮ್ಮ ಭಾಗ್ಯದ ಬಾಗಿಲು ತೆರೆಸುವೆನೆಂದು ಆತನು ಆಶ್ವಾಸನೆ ಕೊಡುವನು.

ಭಾಗ್ಯದ ಬಾಗಿಲು ತೆರೆಯುತ್ತದೆ. ಯಾರ ಭಾಗ್ಯ ಎನ್ನುವುದೊಂದು ಪ್ರಶ್ನೆ, ಎಂತಹ ಭಾಗ್ಯ ಎನ್ನುವುದು ಇನ್ನೊಂದು ಪ್ರಶ್ನೆ. ಒಂದೊಂದು ಪ್ರಶ್ನೆಗೂ ಎರಡೆರಡು ಉತ್ತರಗಳಿರಲು ಸಾಧ್ಯ. ಜನತೆಯ ಭಾಗ್ಯ, ಪ್ರತಿನಿಧಿಯ ಭಾಗ್ಯ. ಸೌಭಾಗ್ಯ· ದುರ್ಭಾಗ್ಯ.

ಇದು ರೇಡಿಯೋ ಟೀವಿಗಳಲ್ಲಿ ಹೇಳುವ ಹಾಗೆ 'ಆಂ ಜನತೆ'ಯ ಅದೃಷ್ಟಕ್ಕೆ ಬಿಟ್ಟದ್ದು. ಈಗಂತೂ ಜನತೆ ALMS ಬೇಡುತ್ತಿದೆ.

ಆದುದರಿಂದ ಪ್ರತಿನಿಧಿಗಳು ಜನತೆಗೆ ಸಂತೋಷವನ್ನುಂಟು ಮಾಡದ ಅಧಿಕಾರ ನನಗೇಕೇ ಎನ್ನುವಂತಹ ಗುಣವಂತರಾಗಲಿ.

ಈ ಭೂಮಿಯ ಹಣವೆಲ್ಲವೂ ದೊರೆತರೆ ನಾನು ಅಮೃತಳಾಗುವೆನೇ ಎಂದು ಮೈತ್ರೇಯಿ ಕೇಳಿದಾಗ ಹಣಕ್ಕೂ ಅಮೃತತ್ವಕ್ಕೂ ಯಾವ ಸಂಬಂಧವೂ ಇಲ್ಲ ಎಂದು ಯಾಜ್ಞವಲ್ಕ್ಯನು ನನಗೇನು ಎಂದು ಮೈತ್ರೇಯಿ ಹೇಳಿದಳು. ಆದರೆ

ಮೈತ್ರೇಯಿ, ಜ್ಞಾನಿ ಪ್ರತಿನಿಧಿಗಳು ?



ಪ್ರಕಾಶ್

ಲೋಡ್ ಷೆಡ್ಡಿಂಗ್ ಅನಿವಾರ್ಯ ; ಶ್ರೀ ಪಟೇಲ್

ಸರಿ, ಜನತಾ-ದಾಳ ಶುರುವಾಯಿತು !

* * *

ಸೋನಿಯೂ ಸಂದರ್ಶನಕ್ಕೆ ಕರ್ನಾಟಕ ಶಾಸಕರ ಕೋರಿಕೆ

–ಸುದ್ದಿ

'ಆಳಿಗೊಂದು ಕಲ್ಲು !'

* * * *

ಅಗ್ಗದ ಅಕ್ಕಿ ಏಪ್ರಿಲ್‌ಗೆ ಆರಂಭ

–ಸುದ್ದಿ

ಏಪ್ರಿಲ್ ಒಂದರಿಂದ ತಾನೇ ? ?

* * *

ಉತ್ತಮ ಸರ್ಕಾರ ನೀಡಲು ದಳಕ್ಕೆ ಸಲಹೆ

–ಪತ್ರಿಕೆ

ಅರಣ್ಯ ರೋದನ ಅಂದರೆ ಇದೇ ! !

* * * *

"ಬಡವರು ಉಪಯೋಗಿಸುವ ವಸ್ತುಗಳಿಗೆ ನಾನು ಮಾಡೆಲ್ ಆಗುತ್ತೇನೆ"

-ಐಶ್ವರ್ಯ ರೈ

ಅರ್ಥವಾಯಿತು ! !

* * *

ಕೊಳೆತದ್ದು ಹೋಗ ಬೇಕು ; ಆಗ ಪಕ್ಷ ಶುಚಿಯಾಗುತ್ತದೆ

–ನರಸಿಂಹರಾವ್

ಏನಾದರೂ ಉಳಿದರೆ...... ! !

* * * *

'ನಾನು ಭಾವನಾತ್ಮಕ ಜೀವಿಯೂ ಹೌದು ವಾಸ್ತವಿಕ ಜೀವಿಯೂ ಹೌದು'

–ಲಕ್ಷ್ಮಿ ಪಾರ್ವತಿ

ಹಾಗೇ ಕಾಣುತ್ತೆ ! !

* * *

ಪೂಜಾರಿ ವಜಕ್ಕೆ ಮೊಯಿಲಿ ಆಗ್ರಹ

–ಸುದ್ದಿ

ದೇವರು ವರ ಕೊಡ ಬೇಕಿಲ್ಲ ! !

* * * *

'ಅಟ್ಲಸ್ ಸೈಕ್‌ಲ್‌ಗಳು ಅಂತರ ರಾಷ್ಟ್ರೀಯ ಮಟ್ಟದಲ್ಲಿ'

–ಜಾಹೀರಾತು

ನಮಗಂತೂ ಸೈಕಲ್‌ಗಳೇ ವಾಸಿ ! !

* * * *

5

ಬೋರನ ಅಧಿಕ ಪ್ರಸಂಗ

ರೇರ್ಷ...ರೇರ್ಷ...ರೇರ್ಷ–೧

ಕೆ. ವಿ. ಶ್ರೀನಾಥ್

ಯಜ್‌ಮಾನ್ರು ಕರ್ದು "ಬೋರ ವೋಗಿ ಚಕ್ರಿ ತಕಂಡ್ ಬಾರ್ಲ" ಅಂತ ಬ್ಯಾಗೂ ಕಾಲ್ಡೊ ಕೊಟ್ ಕಳುಸುದ್ರು... ತಕ್ಕಳಪ್ಪ! ಇನ್ನು ಅಲ್ಲಿ ಸಾಲ್ನಾಗ್ ನಿಂತು ಸಾಯ್ ಬೇಕಲ್ರಪ್ಪ ಅಂತ ಅಂದ್ ಕಂಡ್ನು ನನ್ ಗುಡ್ಲುತಾವ್ಕೆ ಬಂದೆ... ಯಜ್ ಮಾನ್ರು ರೇರ್ಸ ತರಕ್ ಏಳ್ದಾಗ್ನೆಲ್ಲ ಅಕ್ಕಿ, ತಿನ್ನೊಕಾಗೋ ಅಂಗಿದ್ರೆ ನಾನೇ ತಕ್ಕಂ ತ್ತೀನಿ, ಯಜ್‌ಮಾನ್ರು 'ಚಕ್ರಿ' ಸಾಕ್ಲ ಅವ್ತಾರೆ... ಅವರ್ಗೆ ಈ ರೇರ್ಸ ಅಕ್ಕಿ, ಗ್ವಾದಿ ತಿಂದ್ರೆ ಮೈಗಂಟಾಕಿಲ್ಲ... ನಡ ಸಡ್ಲ ಆಗ್ಬುಡ್ತದೆ. ಆದ್ರಿಂದ ಅಕ್ಕಿ, ಗ್ವಾದಿ, ತಕಳ್ಯಾವ ಅಂತ ನನ್ ಗುಡ್ಲುಗ್ ಬಂದು ಬ್ಯಾಗ್ ತಕಂಡು ರೇರ್ಸ ಸಾಪ್‌ಗೆ ಬತ್ತಿ ದ್ನರ ... ದಾರೀನಾಗ್ ಎಜ್‌ಮಾನ್ರ ತಂಗ್ಯವ್ವಾವ್ರ ಮನೆ ಐತೆ... ಅಲ್ಲಿ ಅವ್ವ ಅವ್ರು ನಿತ್ಕಂಡಿದ್ರು ಐನ್ ಬೋರ! ರೇರ್ಸ ಸಾಪ್ಗೆ ವಂಟ್ಯ ಎಂಗೆ? ವೋಗ್ತಾ ಇದ್ರೆ. ಅಂಗೆ ನಂಗೂ ತಾಳೆ ಎಣ್ಣೆ ಚಕ್ರಿ ತಕಂಬಾರ್ಲಾ..." ಅಂತ ಅಂದ್ರು.

"ಆಯ್ತು ಕೊಡ್ರವ್ವ," ಅವ್ರ್ಕಾ ಅವರ್ದೂ ಇಸ್ಕಂಡು ಗೇರ್ಸ ಸಾಪ್ ತಾವ್ಕೆ ಬಂದೆ, ಏಟು ದ್ವಡ್ ಸಾಲಿರ್ತದೋ ಅಂತ ಎದುರ್ತಾನೆ ಬಂದವನ್ಗೆ ಅಲ್ಲಿ ಜನಾನೇ ಇಲ್ದಿದ್ ಕಂಡು ಬೋ ಕುಸಿ ಆಗೋಯ್ತು-ಜನ ಇಲ್ಲ ಅಂಬ್ತ. ಆದ್ರೆ ಯೋಸ್ನೇನೂ ಅತ್ಕಂತು! ಚಕ್ರೇನೂ ಇರಾಕಿಲ್ವೋನೋ ಅವ್ತ! ಎಂಗೂ ಇರ್ಲಿ ಅಂತ ಅಂಗ್ಡೀ ಬಾಗಲ್ ತಾಕ್ ಬಂದ್ ನಿಂತ್ಕಂಡು ಇಣಕ್ ನೋಡ್ದಾಗ ಅಂಗ್ಡೀಪ್ನ ಕುಂತ್ಕಂಡು ಲೆಕ್ಕ ಅಗ್ತಿದ್ನ ... "ಯಾಕ್ ಬುದ್ದಿ ಜನಾನೇ ಇಲ್ಲ... ಚಕ್ರಿ ಇಲ್ವಾ?" ಅಂತ ಕೇಳ್ದೆ. ಅವ್ನ "ಯಾರಿಲ್ಲ ಅಂದದ್ದು. ಬಾ ಏತೆ" ಅಂತ ಬೋ ಇಸ್ವಾಸ್‌ದಿಂದ ಕರ್ದುದಿಕ್ ಆಚರ್ಯ ಆಗಿ ಅಂಗೆ ಡಂಗಾಗಿ ನಿಂತ್ಬುಟ್ಟೆ......ನಂ ಸಾನ್‌ಬೋಗ್ರು ಯಾವಾಗ್ಲೂ ಏಳೋರು... ಈ ಸೆಟ್ರೂ, ಸೇಚುಗ್ರೂ ನಕ್ರೆ ಏನೋ ಐಬಾಗೈತೆ ಆಂತ... ಅಲ್ಲ ಯಾವಾಗ್ನೋಡಿದ್ರು ಚಕ್ರೀಗ್ ವೋದ್ರೆ 'ಆಗ್ಬಾ ಈಗ್ಬಾ' ಅಂತಿದ್ದೋನು ಅದೆಂ ಗಪ್ಪ ಈಟ್ ವಳ್ಳೇ ಮಾತ್ನಾಗ್ ಕರೀತವ್ನೆ ಅಂತ ಅಂದ್ಕಂಡು ಡೌಟ್ ನಾಗೇ ಅಂಗೇ ನಿಂತವ್ನ "ಚಕ್ರಿ ತೋರ್ಸಿ ಸೆಟ್ರಿ" ಅಂತ ಅಂದೆ. ಅದ್ಕೆ ಅವ್ನ ಎಂತಾ ಚಕ್ರಿ ತೋರಿಸ್ದಾ ಅಂತೀರ...! ವದ್ದೆ ಆಗಿ ಮುದ್ದೆ ಆಗೋಗಿತ್ತು. !

ಅಷ್ಟೆ. ಅದ್ನ ತಕಳ್ಳಾಕೆ ಯಾರೂ ನಿಂತಿರ್ಲಿಲ್ಲ...! ನನ್ನಂತ ಗಮಾರ ಬತ್ತಾನ ಅಂತು ಈವಯ್ಯ ಕಾದಿದ್ದ ! ನನ್ ತಲೀಗ್ ಕಟ್ಟಾಕೆ ನಾಲ್ಗಿಗ್ ಜೇನ್ ಸವರ್ಕಂಡು ಮಾತ್ಯಾಡ್ತಾ ಅಷ್ಟೆ ! ಎಲಾ ಇಷ್ಟೆ ! ವಂದೊಂದ್ ತಿಂಗ್ಳು ವಂದಂದ್ ಆಟ ಕಟ್ತಾವ್ನಲ್ಲ ಈ ಸೆಟ್ಟಿ ! ಇವನ್ ಮನೆ ಎಕ್ಕುಟ್ಟೋಗ ! ಯಾಕ್ ಈ ರೇಸ್ನ ಸಾಪ್ಕ ಕೋರು ಇಂಗಾಗ್ಬಿಡ್ತವ್ರೆ ಅಂತ ?

ಅಲ್ಲ ! ವೋದ್ ತಿಂಗ್ಳು ಚಕ್ರೆ ಬ್ಯಲೆ ಎಚ್ಚಾಯ್ತಲ್ಲ, ಆಗ ಚಕ್ರೇನೆ ಬಂದಿಲ್ಲ ಅಂತ ವಂದ್ ಕೆಜೀಗ್ ಅರ್ಧ ಕೇಜಿ ಅಂಗೆ ಎಲ್ರೂಗೂ ಕೊಟ್ಟ ! ಆ ಚಕ್ರೇಗೂ ಸಣ್ ರವೆ ಬ್ಯರಿಕೆ ಆಗಿತ್ರ ! ಅದಕ್ಕೊಂದ್ ತಿಂಗ್ಳು ವಗೂರ್ ತೂಕ್‌ದ್‌ಗ್ ಏರ್ ಪೇರ್ ಮಾಡಿ ವ್ರನಿಲ್ಲ ಅಂದ್ರೆ ಕೆಜೀಗ್ ನೂರ್ ಗ್ರಾಂ ವ್ಯಾಗೆ ನುಂಗಾಕೋವ್ನ ! ಈವದ್ದೆ ಮುದ್ದೆ ಚಕ್ರೆ ತಲೀಗ್ ಕಟ್ಟಾಕೆ ಬೆಣ್ಣೆ ಅಚ್ಚಿ ಮಾತಾಡ್ತವ್ನೆ !

ಇರ್ಲಿ ಅಂತ ಅಂದ್ಕಂಡು "ಎಣ್ಣೆ ಐತ !" ಅಂತ ಕೇಳ್ದೆ. "ಐತೆ, ಆದ್ರೆ ಐದ್ ಕೆ.ಜಿ. ಚಕ್ರೆ ತಕಂಡ್ರೆ ವಂದ್ ಕೆ. ಜಿ. ಎಣ್ಣೆ ಚಿಗ್ತದೆ" ಅಂದ್ನಲ್ಲ !"

"ಅಲ್ಲಿ ಸೆಟ್ಟಿ ! ಚಕ್ರೆನ್ಬಾಡುದ್ರೆ ವಳ್ಳೆ ಮಿಠಾಯ್ ಅಂಗ್ಡಿ ಬತ್ತಾಸ್ ಆದಂಗ್ ಅಂಟಾಗೋಗದೆ... ಇದ್ನ ತಕಂಡೋದ್ರೆ ಯಜ್‌ಮಾನ್ರು ನನ್ನ ನೇಣ್‌ಗಟ್ಬುಸ್ ಬುಡ್ತಾರಸ್ಟೇನೇವ... ಬರೀ ಎಣ್ಣೆ ಕೊಡ್ ಸೆಟ್ಟಿ" ಅಂತ ಏಳ್ದೆ... ಅವ್ನು "ನೋಡಮ್ಮ, ಬ್ಯಕಾರೆ ಎಲ್ಲಾ ತಕಂಡ ವೋಗು... ಇಲ್ಲ ಅಂದ್ರೆ ಜಾಗ ಕಾಲಿ ಮಾಡು..." ಅಂತ ನನ್ನ ನಾಯ್ನುಟ್ಟಂಗೆ ಅಟ್ ಬುಟ್ನಲ್ಲಪ್ಪ! "ವಳ್ಳೇ ಸೆಟ್ಟಿ ಕಣಯ್ಯ ನೀನು ! " ಅಂತ ಬೊಯ್ಕೊಂಡು "ವೋಗ್ಲಿ ಅಕ್ಕಿ, ಗೋಧೆನಾರ ಐತ?" ಅಂತ ಕೇಳ್ದೆ ! "ಯಾಕಮ್ಮ ಅಲ್‌ಮಡ್ಗಿರೊದು ಕಾಣ್ಯಾಕಿಲ್ವ ?" ಅಂತ ಅವ್ನು ರೇಗ್ದ. "ಏನ್ ರೇಟು ಸೆಟ್ಟಿ?" ಅಂತ ಕೇಳ್ತಾ ಅಕ್ಕಿ ವಂದ್ ಕೈನಾಗೆ, ಗೋಧಿ ಇನ್ನೊಂದ್ ಕೈನಾಗೆ ತಕ್ಕಂಡೆ, ಬರೀ ದೂಳಿನ್ ಗಾಟು ! ಎಳ್ದ್ನಾಗೂ ಬರೀ ನುಚ್ಚು, ದೂಳು, ಕಲ್ಲು ! "ಎಂಗಪ್ಪ ಇದು?" ಅಂತ ಕೇಳ್ದೆ. "ಅಲ್ಲೇ ರೇಟಾಕಿಲ್ವ ? ನೋಡು... ಕೇಜೀಗೆ ಏಳು ಚಿಲ್ರೆ..."

ನಾನಾ ಆ ರೇಟ್ ಕೇಳಿ ಅಂಗೆ ಬುದ್ದೋಗ್ತಾ ಇದ್ದೆ... ಈ ಕಚಡ ಅಕ್ಕೀಗೆ ಈಟು ದುಡ್ಡು ! ದ್ಯಾವ್ರೆ ! ಈ ಸರ್ಕಾರ ಯಾಕ್ ಇಂಗ್ ಮೋಸ ಮಾಡ್ತದೆ !

ಇಲ್ಲಿ ಈ ಜನ ಇಂಗ್ ಮೋಸ ಮಾಡೋದ್ನ ಯಾಕ್ ಕಣ್‌ಮುಚ್ಕಂಡು ನೋಡ್ತಾ ಐತೆ...? ಯಾಕೀ ಸನಿಗ್ಳು ಜೀವ್ನಾನ ಇಂಗೆ ಇಂಸೆ ಮಾಡಿ ಮಡ್‌ಗವ್ರೆ ? ಗೋಧೀ ನಾಗೋ ಉಳ. ಕಡ್ಡಿ, ದೂಳು, ಜೊಳ್ಳು ಪೊಳ್ಳು... ನನ್ನಂತೋರ್ನ 'ಅಂದೀ' ಮಾಡಾಕವ್ರೆ... ಏನ್‌ಕಚ್‌ಡ ಕೊಟ್ರು ತಿನ್ಬೇಕ್ ನಾವು ! ಎಲಕ್ಷನ್ ಆದಾಗ ವೋಟಾ ಕೋಕ್ ಮಾತ್ರ ನಾವು ಈ ಕಚಡ ಅಕ್ಕಿ-ಗೋಧಿ ತಿಂದ್ಕಂಡು ಜೀವ ಇಡ್ಕಂಡು ಇರ್ಬೇಕು. ಈ ನನ್‌ಮಕ್ಳು ಚರ್ಕಾರದಾಗಿರೋ ಡಿಪಾಳ್ಮೆಂಟುಗಳ್ನ ವಳ್ಳೆ ಸೂಳೆ ಮನೆ ತರ ಮಾಡ್ಕಂಡು, ದುಡ್ ಮಾಡ್ಕಂಡು, ಮಜ ವಡೀತಾ ಅವ್ರಲ್ಲ...! ಅವರ್ ಮನೆ ಎಕ್ಕವ್ರಟ್ಬೋಗ...! ಆ ನನ್‌ಮಕ್ಳನೆಲ್ಲ ಸಾಲಾಗ್ ಕಟ್ಟಾಕ್ಸಿ ಈ ಅಕ್ಕಿ ಗೋಧಿ ನಾಗೆ ಊಟ ಮಾಡುಸ್ಬೇಕು... ಆಗ್ ಗೊತ್ತಾಗ್ತದೆ ವೋಟಾಕೋ ಜನ ನಾವು ಏನ್ ತಿಂತಾ ಅದೀವಿ ಅಂತ...!

ಈ ರೇಸನ್ ಸಾಪಾಗಳ್ನಾಗೋ ವಳ್ಳೇ ಸಾಮಾನುಗ್ಳುನ್ನ ತಿಂಗ್ಳ ಕೊನೇಲಿ ತರುಸ್ತಾರೆ... ಯಾತರ್ವನೂ ವಂದ್‌ದಮ್ಮಡಿ ಇರಾಕಿಲ್ಲ...ಆಗ ವಳ್ಳೆ ಗೋಧಿ ಅಕ್ಕಿ ತರುಸ್ತಾನೆ... ಅವು ಬಂದಂಗೆ ಎಲ್ಲೋ ಯಾವ ಅಗ್ಬುಟ್ಟು ಈ ಅಳುಸ್ಲು ಪಳುಸ್ಲು ಬಂದು ಸ್ಟಾಕ್‌ನಾಗ್ ಬೂಳ್ತವೆ... ಇನ್ನು ಚಕ್ರೆ ವಳ್ಳೇದು ಅಂಗೆ ಗೋಡೋನ್‌ನಿಂದ ವರಕ್ ಬರ್ತಿದ್ದಂಗೆ ಸಾಪೊಬರ್ದೆ ಅಂಗೇ ಬ್ಯಾರೇ ಕಮೀಕ್ ಓಗ್ಬುಡ್ತೈತೆ ! ಅಂಗ್ಡೀಲಿರೋ ಲೆಕ್ಕದ್ ಪುಸ್ತಕ ಮಾತ್ರ ತುಂಬಿರ್ತವೆ. ಇನ್ನು ಅಂಗ್ಡೀನಾಗ್ ಚಿಗೋದು ಏನು ಅಂತ ಗೊತ್ತೇ ಐತೆ ಅಲ್ವ ?

ಅಲ್ಲ ಈ ರೇಸನ್ನವ್ರು ಮಾಡಾದು ಚ್ಯಪ್ಟಿ ಒಂದಾ-ಎಳ್ಡಾ? ಮೊನ್ನೆ ನಂ ಯಜ್‌ಮಾನ್ರು ಕಾಲ್ಡನೇ ಎತ್ ಆಕ್ಬುಟ್ಟಿದ್ದ ಅಂಗ್ಡೀವ್ನು... ! ನಾ ಬುಟ್ಟೇನ... ವೋಗಿ ಯಜ್‌ಮಾನ್ರಿಗೂ ರೋಪ್ ವಡ್ದ...ಅವ್ರಿಗ್ ಎಂತ ಕ್ವಾಪ ಬಂತು ನೋಡ್ರೀ ಅಂಗ್ಡಿವನ್ನ ಎಳೆದ್ ವರಕ್ ಆಕಿ ನಾಕು ದಂಚಿ...ಅಂಗೆ ದರದರ ಅಂತ ಪೋಲೀಸ್ ಟೇಸನ್‌ಗೆ ಎಳ್ಕಂಡ್ ವೋಗಿ ಕೇಸಾಕ್ಸೀ ಬುಡ್ರು... ಆದ್ರೂ ಅವ್ರುನ್ ಆಟ ನಿಲ್ಲಾಕಿಲ್ಲ... ಏಟಾದ್ರೂ ನಾಯ್‌ಬಾಲ ಡೊಂಕಲ್ವರೇ ?

47ರ ದುಷ್ಪಟ್ಟು 94

ಶಿವರಾಮ ಕಾರಂತ

ನಾಲ್ವತ್ತ ಏಳಕ್ಕೆ ಬಂದಿತ್ತು ಸ್ವಾತಂತ್ರ್ಯ
ಅದಕರೆದರಂದು 'ಪ್ರಜಾಸತ್ತ'
ಮಾರಾಟಿರಿಗದು "ಲೋಕ ಸತ್ತೆ"
ಆ ತಂತ್ರ ಸ್ವಾತಂತ್ರ ದೊರೆತಾಕ್ಷಣ
ವೀರ ಭಾರತೀಯರೆಲ್ಲರ ಗರ್ಜ–
ಕೇರಳದ ತೀಯರು ಮಾತ್ರವಲ್ಲ
ದೇಶದಾನರನಾರಿಯರಲೆಲ್ಲ ಸೇರಿ
ಪರದೇಶಿ ಬಿಳಿಯರನು ನಾರಿನಾದೊರೆಗಳನು
ಗೆದ್ದು ಕೂಗಾಡಿದರು-ಭಾರಿ ಭಾರಿ.
ಪ್ರಜೆಗಳಿದ್ದರೂ ಸತ್ತಂತೆ ಎಂದೆನಿಸಿ
ನಿರಕ್ಷರ ಕುಕ್ಷಿಗಳ ಬುದ್ಧಿ ಪರಿಗನಿಸಿ

ಅವರು ಕೈ ಎತ್ತಿದೊಡೆ ತಾವ್ ಆವರಾಗಿ
ಆಳತೊಡಗಿದರೈ ಜಾಣರಾ ದಂಡು ಬೀಗಿ,
'ನೀವಾಳಿ, ನೀವಾಳಿ' ಎಂದು ಹರಸಿದ ಗಾಂಧಿ
ತೂಗಿದರು ತಲೆಗಳನು ಬೀಗಿತಾ ಮಂದಿ
ಮೊದಲ ಹೆಜ್ಜೆಗೆ ಅಟ್ಟಿದರು ಆಂಗ್ಲ ಸಿಬ್ಬಂದಿ
ಮುಂದೆ ಯಾವತ್ತು ನವಾಬ, ರಾಜ, ಮಾರಾಜ ಮಂದಿ
ಸಾಮುದ್ರಿಕೆಯು ಬಲ್ಲವರು ಅಂದೆ ಅನ್ನುವರು,
'ಹಸ್ತಗುಣ ಸಟೆಯಲ್ಲ, ಅದಕಿಲ್ಲ ಕಸರು'
'ವಜಾತಂತ್ರ' ಮೆರೆಮೆರೆಸಿ ಎತ್ತಿದರು ಸಾಲ
ತಂತಮ್ಮ ಕಿಸೆ ತುಂಬೆ ನೇತಾರ ಜಾಲ
ಭವಿತವ್ಯ ಎಂದೆಂದಿಗೂ 'ಭವ್ಯನವ್ಯ'

ನೆಹರೂ ಹಿಡಿದ ಚುಕ್ಕಾಣಿ ನೋಡಿ–
ತೇಲಿತದು ಸಾಲಸಾಗರದಲ್ಲಿ-ಮೋಡಿ
ಯಾನವಾಯಿತು ಆಗ ದಾರಿ ಕುರುಡು
ಶತಕೋಟಿ ಜನತೆಯ ಭವಿಷ್ಯ ಬರಡು !
ಕೈಯ ಲಕ್ಷಣ ನೋಡಿ ಗುರಿಯು ಬಾನು
ಭವಿತವ್ಯ ಮೃಗಜಲವು ಮುಂದೇನು ಏನು ?
ಕೈಗುಣವೆ ಹಾಗಿಹುದು-ನುಡಿಯು ಮೋಡಿ
ನೀಡಿದಾ ಸಾಲಕುಕೊಡು ಅದೆ ಕೈಯ್ಯ
ಕೈಕೊಡುವ ಚಳಕದಲಿ ಅಳಿದರು ದೇಶ
ಅಷ್ಟರಲಿ ತಾಳುತ್ತ ಹಲವಾರು ವೇಷ.
ಒಗ್ಗೂಡಿ ಘೋಷಿಸಿರಿ ಭೇಷ ಭೇಷ

It you Look like your Pass port Photo you,re too ill to travel

ಶಿವು

ಯಾವ್ದಾದ್ರೂ ಅತಿ ಮುಖ್ಯವಾದ ಕೆಲಸಕ್ಕೆ ಹೊರಟಾ ನೂರೆಂಟು ವಿಘ್ನಗಳು ಇದಿರಾಗೊಂದು ಎಲ್ಲರಿಗೂ ಗೊತ್ತಿರೋ ಸಂಗತಿ. ಆದ್ರೆ ಈ ನೂರೆಂಟರಲ್ಲಿ ಯಾವ ವಿಘ್ನ ಯಾವಾಗ ಆಗುತ್ತೆ ಅಂತ ವೈಜ್ಞಾನಿಕವಾಗಿ ಕಂಡು ಹಿಡಿಯೊಕ್ಕೆ ಆಗುತ್ತ್ಯೇ ? ಆಗುತ್ತೆ ಅಂತಾನೆ ಖ್ಯಾತ ವಿಜ್ಞಾನಿ ಮರ್ಫಿ. ಅವನ ಪ್ರಕಾರ ಯಾವ ವಿಘ್ನದಿಂದ ಅತ್ಯಂತ ಹೆಚ್ಚು damage ಆಗುತ್ತ್ಯೋ ಅದೇ ವಿಘ್ನ ತಪ್ಪದೇ ಆಗುತ್ತಂತೆ. ಉದಾಹರಣೆಗೆ, ನಮ್ಮ ನಾಣಿ ಮನೇಗೆ ಹೆಣ್ಣುನೋಡುಕ್ಕೆ ಭಾವೀ ಬೀಗರು ಬರೋದಿತ್ತು. ನಾಣಿ ಬಲು ಹುಷಾರಿ ಆಸಾಮಿ, ಸಂಜೆ ಆರೂವರೆಯಿಂದ ಏಳುಕಾಲರವರೆಗೆ K.E.B. ನೋರು ಲೋಡ್ ಷೆಡ್ಡಿಂಗ್ ಮಾಡ್ತಾರೆ ಅಂತ ಅನುಭವದಿಂದ ತಿಳ್ಕೊಂಡು, ಅತಿಥಿಗಳಿಗೆ ಏಳೂವರೆಗೆ ಬರುಕ್ಕೆ ಹೇಳಿದ್ದ. ಆ ಸಂಜೆ ಆರೂವರೆಗೆ ಪವರ್ ಹೋಗ್ಲೇ ಇಲ್ಲ. ಏಳೂ ಕಾಲಾದ್ರೂ ಮನೆ ದೀಪಗಳಲ್ಲಾ ಝಗ ಝಗಾಂತ ಉರೀತಾನೇ ಇದ್ವು, ಭಾವೀ ಬೀಗರು ಏಳೂವರೆಗೆ ಬಂದ್ರು. ಬೀಗಿತ್ತಿ ಮನೆ ಹೊಸಲು ದಾಟಕ್ಕಿಲ್ಲ-ಗಾಢಾಂಧಕಾರ ಮನೇನೆಲ್ಲಾ ಆವರಿಸ್ತು. ನಾಣಿ ಏನೋ ಕ್ಯಾಂಡಲ್ ಬೆಳಕಿನಲ್ಲೇ ಅತಿಥಿ ಸಂತ್ಕಾರ ಮಾಡ್ದ ಅನ್ನಿ. ಆದ್ರೆ ಆ ಕೆ.ಇ.ಬಿ. ನೋರ್ಗೆ ಈ ಬೀಗಿತ್ತಿ ಹೊಸಲುದಾಟೋ ಶುಭಮುಹೂರ್ತ ಅಷ್ಟು ನಿಖರವಾಗಿ ಹೇಗೆ ಗೊತ್ತಾಯ್ತು ? ಅಯ್ಯೋ ! ಅದೇನ್ ಬಿಡಿ ಕಾಕತಾಳ ನ್ಯಾಯ ಅನ್ಕೋ ಬೇಡಿ. ಜಗತ್ತಿನಾದ್ಯಂತ ಸದಾಕಾಲವೂ ನಡೀತಾನೇ ಇರೋ ಇಂತಹ ಸಂಗತಿಗಳನ್ನ ವೈಜ್ಞಾನಿಕ ಶ್ರದ್ಧೆಯಿಂದ ಅಭ್ಯಾಸ ಮಾಡಿ ಮರ್ಫಿ ಅನ್ನೋ ವಿಜ್ಞಾನಿ ಒಂದು ನಿಯಮ ಕಂಡು ಹಿಡಿದ. ಆ ನಿಯಮ ಏನು ಗೊತ್ತೇ ?

If anything can Possibly go wrong, it will.

ಕೈಗಾರಿಕೆಗಳಲ್ಲಿ ಕೆಲಸ ಮಾಡ್ಕೋರ್ಗೆ ಈ ನಿಯಮ ಬಹು ಚೆನ್ನಾಗಿ ಪರಿಚಯ ಇರುತ್ತೆ-ಯಾವ್ದೋನೋ ಅತಿ ಮುಖ್ಯವಾದ ಗಿರಾಕಿ ಬಂದು ನೀವು ತಯಾರಿಸಿರೋ ನೂರು ವಸ್ತುಗಳ ರಾಶಿಯಿಂದ ಒಂದನ್ನ ಕೈಗೆತ್ತಿಕೊಂಡ್ರೆ ಗ್ಯಾರಂಟಿ ಆ ವಸ್ತುನಲ್ಲೇ ಕಣ್ಣಿಗೆ ಹೊಡೆಯೋ ಹಾಗೆ ಏನೋ ಹುಳುಕು ಇರುತ್ತೆ, ಗಿರಾಕಿ ಭುಜ ಕುಲುಕಿ. ಸದ್ಯಕ್ಕೆ ಈ ಸಾಮಗ್ರಿ ಬೇಡ, ಮುಂದೆ ನೋಡೋಣ ಅಂತ ಹೇಳಿ ಹೊರಟಹೋದ

ಮೇಲೆ. ನೀವು ಯಾತಕ್ಕೆ ಹೀಗಾಯ್ತು ಅಂತ ಮಿಕ್ಕರೋ ತೊಂಭತ್ತೊಂಭತ್ತು ವಸ್ತುಗಳನ್ನ ಕೂಲಂಕಷವಾಗಿ ಪರಿಶೀಲಿಸಿದ್ರೆ-ದುರ್ಬೀನು ಹಾಕಿ ನೋಡಿದ್ರೂ ಒಂದ್ರಲ್ಲಾದ್ರೂ ಒಂದು ಹುಳುಕೂ ಕಾಣೋಲ್ಲ, ಗಿರಾಕಿ ಕೈಗೆ ಇದ್ದ ಒಂದೇ ಒಂದು ಹುಳುಕು ವಸ್ತು ಸಿಗೋ ಹಾಗೆ ಮಾಡಿದ್ದು ಮರ್ಫಿಯ ನಿಯಮ. ಮರ್ಫಿ ತನ್ನ ನಿಯಮಾನ ಪ್ರತಿಪಾದಿಸಿದ ಮೇಲೆ ಅದೇ ತಳಹದಿಯ ಮೇಲೆ ಇನ್ನೂ ಅನೇಕ ಉಪನಿಯಮಗಳನ್ನು ಕಂಡು ಹಿಡಿದ.

ಉಪನಿಯಮ ೦ : If there is a Possibility of Several things going wrong the one that will Cause the most damage will be the one that will occur.

ಉಪನಿಯಮ ೨ :– It you are feeling good, don't worry, you'll get over it.

ಮರ್ಫಿಯ ತರಹಾನೇ ಇನ್ನೂ ಅನೇಕ ಅನುಭವಸ್ಥ ವಿಜ್ಞಾನಿಗಳು ತಮ್ಮದೇ ಆದ ನಿಯಮಗಳನ್ನ ಪ್ರತಿಪಾದಿಸಿ, ನಮಗೆ ಬಿಟ್ಟು ಹೋಗಿದ್ದಾರೆ. ಇವರೆಲ್ಲರ ಮೂಲ ಪುರುಷ ಸಿ. ನಾರ್ತ್‌ಕೋಟ್ ಪಾರ್ಕಿನ್‌ಸನ್

ಪಾರ್ಕಿನ್‌ಸನ್ನನ ಮುಖ್ಯ ನಿಯಮ ಹೀಗಿದೆ.

Work Expands to fill the time available for its Completion.

ಎಲ್ರಿಗೂ ಅನುಭವಕ್ಕೆ ಬಂದಿರೋ ಸಂಗ್ತೀನೇ ಇದು. ಯಾರಾದ್ರೂ ಯಾವಾಗ್ಲಾದ್ರೂ ತಮ್ಮ ಕೆಲ್ಸಾನ ಅವಧಿಗೆ ಮುಂಚೆ ಮುಗ್ಸಿ ಕೈ ಕಟ್ಟಿಕೊಂಡು ಕೂತಿರೋದು ನೋಡಿದ್ದೀರಾ ? ಹೋದ ತಿಂಗಳು ನನ್ನ ಕಾರನ್ನ ರಿಪೇರಿಗೆ ಕೊಡಬೇಕಾಯ್ತು, ಬೆಳಗ್ಗೇನೇ ಮೆಕ್ಯಾನಿಕ್ ಹತ್ರ ಹೋಗಿ, ಕಾರ್ ಕೊಟ್ಟು, ಯಾವಾಗ ರೆಡಿಯಾಗುತ್ತೆ ಅಂತ ಕೇಳ್ದಾಗ, "ನಾಳೆ ಸಂಜೆ ಬಂದ್ಬಿಡಿ ಸಾರ್ ರೆಡಿಯಾಗಿರುತ್ತೆ" ಅಂತ ನಯವಾಗಿ ಹೇಳಿ ನನ್ನ ಸಾಗಹಾಕಿದ. ನಾನು ಹಳೇ ಗಿರಾಕಿ. ಇವರ ಚಾಳಿ ನನಗೆ ತೀರಾ ಗೊತ್ತಿರೊ ವಿಷಯ. ಹಾಗಾಗಿ, ನಾನು ಎರಡುದಿನ ಬಿಟ್ಟು ಮೂರನೆಯ ದಿನ ಸಂಜೆ ಅಲ್ಲಿಗೆ

ಹೋದೆ. ಚಕ್ರ, ಬಾಗಿಲು, ಎಲ್ಲಾ ಬಿಚ್ಚಿ, ಸ್ಟ್ರಿಪ್-ಟೀಸ್ ಮಾಡಿರ್‍ತಾನೆ ಕಾರಿಗೆ ಅನ್ಕೊಂಡು ಹೋದ್ರೆ, ಆಶ್ಚರ್ಯ ಕಾದಿತ್ತು. ಬಾಗಿಲು, ಚಕ್ರ, ಎಲ್ಲಾ ಎಲ್ಲೆಲ್ಲಿರ ಬೇಕೋ ಅಲ್ಲಲೇ ಇವೆ! ಮೆಕ್ಯಾನಿಕ್ ಬಂದ "ಪರ್ವಾಗಿಲ್ಲಯ್ಯ ಕಾರ್‌ನ ನಿನ್ನೇನೇ ರೆಡಿ ಮಾಡಿರೋ ಹಾಗೆ ಕಾಣುತ್ತೆ" ಅಂದೆ. ಅವ "ಸಾರಿ ಸಾರ್, ಮೂರುದಿನಗ ಳಿಂದ ಕೆಲಸದ ಹುಡುಗರು ಚಕ್ಕರ್. ಹಾಗಾಗಿ ನಿಮ್ಮ ಕಾರ್‍ನ ಮುಟ್ಟೋಕ್ಕೆ ಆಗಿಲ್ಲ. ನಾಳೆ ಬಂದ್ಬಿಡಿ, ಖಂಡಿತ ರೆಡಿಯಾಗಿರುತ್ತೆ" ಅಂತ ಮೊದಲಿನಷ್ಟೇ ನಯವಾಗಿ ಹೇಳಿದ. ಕೋಪಶಮನಕೋಸ್ಕರ ನಾನು ಮನಸ್ಸಿನಲ್ಲೇ "ಪಾರ್ಕಿನ್‌ಸನ್ ಪಾರ್ಕಿನ್ ಸನ್" ಅಂತ ಜಪಿಸುತ್ತಾ ಮನೆಗೆ ಹಿಂತಿರುಗುಕ್ಕೆ ಆಟೋಗೆ ಕಾಯುತ್ತಾ ನಿಂತೆ.

ಪಾರ್ಕಿನ್‌ಸನ್ ಅಷ್ಟೇ ಖ್ಯಾತನಾದ ಇನ್ನೊಬ್ಬ ವಿಜ್ಞಾನಿ ಅಂದ್ರೆ, ಡಾ|| ಲಾರೆನ್ಸ್ ಜೆ. ಪೀಟರ್. ಇವನು ಪ್ರತಿಪಾದಿಸಿದ ಪೀಟರ್ ಪ್ರಿನ್ಸಿಪಲ್ ಜಗತ್ ಪ್ರಸಿದ್ಧ.

In a hierrchy each employee tends to rise to his level of incompetance.

ಈ ನಿಯಮದ ಪ್ರಭಾವಾನ ನಮ್ಮ ಯಾವ ಪಬ್ಲಿಕ್‌ಸೆಕ್ಟರ್ ಕಂಪನಿಲಾದ್ರೂ ಕಾಣಬಹುದು-ಈ ಕಂಪನಿಗಳಲ್ಲಿ ಕೆಲವು ಮ್ಯಾನೇಜರುಗಳು ಕೆಲಸ ಮಾಡೋದುನಿಲ್ಲಿಸಿ ವರ್ಷಗಳೇ ಕಳೆದಿರುತ್ತೆ. ಆಕಸ್ಮಾತ್, ಯಾವುದಾದರೂ ಮ್ಯಾನೇಜರ್ ದಕ್ಷನಾಗಿದ್ದ ಅಂತ ಇಟ್ಕೊಳ್ಳಿ ಆವಾಗೇನಾಗತ್ತೇ ? very competant ಅಂತ ಪ್ರಮೋಷನ್ ಕೊಟ್ಟು ಮೇಲಕ್ಕೆ ದಬ್ತಾರೆ ಅಲ್ವೇ. ಪ್ರಮೋಷನ್ ಯಾವಾಗ ನಿಲ್ಲುತ್ತೆ ? ಅವನು Incompetant ಆದಾಗ ತಾನೇ ಅದಕ್ಕೇ ಪೀಟರ್ ಹೇಳೋದು, ಎಷ್ಟೇ ಪ್ರತಿ ಭಾಶಾಲಿ ಯಾಗಿದ್ರೂ, ಒಬ್ಬ ಮ್ಯಾನೇಜರ್ ತನ್ನ Incompetant ಲೆವೆಲ್ ವರೆಗೂ ಮಾತ್ರಾ ಮೇಲಕ್ಕೇರಲು ಸಾಧ್ಯ ಅಂತ.

ಈ ಮರ್ಫಿ ಪಾರ್ಕಿನ್‌ಸನ್, ಪೀಟರುಗಳೇ ಅಲ್ಲದೇ, ಇನ್ನೂ ಅನೇಕ ಅನುಭವಸ್ಥ ವಿಜ್ಞಾನಿಗಳು, ವ್ಯವಹಾರ ಚತುರರು ತಮ್ಮ ಹೇಳಿಕೆ, ನಿಯಮ, ಸಿದ್ಧಾಂತಗಳನ್ನು ನಮಗೆ ಬಿಟ್ಟು ಹೋಗಿದ್ದಾರೆ. ಹಲವು ಉದಾಹರಣೆಗಳು.

Adler's Maxim :

The cheif danger in life is that you may take too many precautions.

Barth's Distrinction :-

There are two types of people. Those who divide people into two types and those who don't.

Benchly'e law :

Any man can do any amount of work, provided it isn't the work he is supposed to be doing.

Chevalier's Hypothesis

Growing old isn't so bad when you consider the alternative.

FLO Capp's theory :

If there is one things worse than being wrong, it is being right with nobody is listening.

Tong's law :

Advice is what we ask for when we already know the answer but wish we din't.

Peter's inevitadueily principle:

Live each day as if it were you last-and eventually you'll be right

ಕೊನೆಯಲ್ಲಿ ನನಗೆ ಬಹು ಇಷ್ಟವಾದ ನಿಯಮವೊಂದನ್ನು ಕೇಳಿ, ಇದರ ಹೆಸರು Point of ho return law . ಅಂತ,

ಅದು ಹೀಗಿದೆ.

The light at the end of the tunnel could be the head light of an on coming train.

ನೀವೂ ಸಹ ನಿಮ್ಮ ಜೀವನಾನುಭವವನ್ನು ಅವಲೋಕಿಸಿ, ಹಲವು ನಿಯಮ ಗಳನ್ನು ಪ್ರತಿಪಾದಿಸಿ, ನಮಗೆ ಬರೆದು ಕಳಿಸಿ. ನಿಯಮದಲ್ಲಿ ಸತ್ಯವಿದ್ದರೆ ಖಂಡಿತ ಪ್ರಕಟಿಸುತ್ತೇವೆ. ಬರೀತೀರಾ ತಾನೆ ?

ಸಂಗಪ್ಪ ಗೆದ್ದ ! ರಾಮಪ್ಪ ಸೋತ !

ಹಾ. ರಾ.

ವೇಗರವಳ್ಳಿ ಎಲೆಕ್ಷನ್ ಸೀನ್ ಪೇಪರುಗಳಲ್ಲಿ ಅಷ್ಟಾಗಿ ರಿಪೋರ್ಟ್ ಆಗಲಿಲ್ಲ. ರೂರಲ್ ಬೇಸ್ ಆದರೂ ಅರ್ಬನ್ ಕುತಂತ್ರ, ಬಾಜಿಬಜಂತ್ರಿಗಳೆಲ್ಲ ಅಲ್ಲೂ ಬಂದು ಸೇರಿ ಕೊಂಡಿದೆ. ಫೈನಲ್ ಆಗಿ ಚುನಾವಣೆ ಅಖಾಡಕ್ಕಿಳಿದು ಕೊಂಡವರ ಪೈಕಿ ಮೆಣಸಿನಕಾಯಿ ಸಂಗಪ್ಪ, ಈರುಳ್ಳಿ ರಾಮಪ್ಪ ಇಬ್ಬರೇ ಹೆಸರು ಹೇಳಬಹುದಾ ದಂಥ ಹುರಿಯಾಳುಗಳು. ಸಂಗಪ್ಪನಿಗೆ ಯಾಕೋ ಈ ಸಾರಿ ಚುನಾವಣೆ ಸಪ್ಪೆ ಎನಿ ಸಿತು. ಕ್ಯಾಂಡಿಡೇಟಿಗೇ ಹಾಗೆ ಅನ್ನಿಸಿದರೆ ಏಜೆಂಟರ ಗತಿ ! ದುಡ್ಡಿಗೇನೂ ಕೊರತೆ ಇಲ್ಲ ಸಂಗಪ್ಪಂಗೆ. ಕಳೆದ ಚುನಾವಣೆಗಳಲ್ಲಿ ಖರ್ಚು ಮಾಡುತ್ತಿದ್ದ ಹಣದ ಶೇಕಡ ಹತ್ತು ಭಾಗದಷ್ಟು ಇನ್ನೂ ಕೈ ಬಿಟ್ಟಿಲ್ಲ ಅಂತ ಹೇಳ್ತಾನೇ ಇದ್ದ ಸಂಗಪ್ಪ. ಹೋದ ಚುನಾವಣೆಯಲ್ಲಿ ಸಂಗಪ್ಪ ಸಂತೇಪೇಟೆಲಿ ಒಂದು ಕಿಲೋಮೀಟರ್ ಉದ್ದದ ಲಾರಿಗಳ ಮೆರವಣಿಗೆ ನಡೆಸಿದ್ದ. ಮೆರವಣಿಗೆ ಅಂದ ಮೇಲೆ ಬ್ಯಾಂಡು ಸೆಟ್ಟು, ಹುಲಿವೇಶ, ಕೋಡಂಗಿಕುಣಿತ, ಪೆಟ್ರೋಮ್ಯಾಕ್ಸು, ಬೆಲೂನು, ಕೀಲು ಕುದುರೆ ಕುಣಿತ ಎಲ್ಲಾ ಇರಲೇಬೇಕಷ್ಟೆ ! ನೋಡಿದವರೆಲ್ಲ ವಾಹನಗಳ ಸಂಖ್ಯೇನ ಎಣಿಸಿ, ಒಂಟೆತ್ತಿನ ಗಾಡಿಗಳಿಗೆ ಕಟ್ಟಿದ್ದ ದನಗಳು ಹಾಕಿದ್ದ ಸಗಣಿ ರಾಶೀನ ನೋಡಿ, ಬ್ಯಾಂಡ್ ಸೆಟ್ಟಿನವರು ಬಾರಿಸಿದ್ದ ಹೊಸ ಹೊಸ ಸಿನಿಮಾ ಹಾಡುಗಳ ರಾಗ ಸಂಯೋ ಜನೆಯನ್ನು ಕೇಳಿ ಸಂಗಪ್ಪಂಗೇ ಜಯ ಅಂತ ನಿರ್ಧರಿಸಿ ಬಿಟ್ಟಿದ್ದರು. ಮೂರು ದಿವ್ಸ ಮಂಡೀಪೇಟೇಗೆ ಹೋಗುಕ್ಕೇ ಆಗ್ತಾ ಇರಲಿಲ್ಲ. ಈ ಚುನಾವಣೇಲಿ ಆ ಸಗಣೀನೂ ಇಲ್ಲ. ಎಮ್ಮೆ ಹಾಡೂ ಇಲ್ಲ. ಯಾರಿಗೆವೋಟು ? ಸಂಗಪ್ಪಂಗೆ ಅಂತ ಕೂಗಾ ಟಾನೂ ಇಲ್ಲ. "ಎಲೆಕ್ಷನ್ ನಡೀತದೇನ್ಲ" ಅಂತ ಅನುಮಾನವಾಗೇ ಕೇಳೋ ವೇಗರವಳ್ಳಿ ಓಟುದಾರರು. ಸಂಗಪ್ಪಂಗೂ ನೆಮ್ಮದಿ ಇಲ್ಲ. ಐದು ವರ್ಷಕ್ಕೊಮ್ಮೆ ಬರೋದು ಪಂಚವಾರ್ಷಿಕ ! ಶ್ರದ್ಧೆಯಿಂದ ಮಾಡಬೇಕಾದ ಶ್ರಾದ್ಧ ಇದ್ಧ ಹಾಗೆ. ಊರಿನ ಜನಗ ಳಿಗೆ ಪಾದ ಪೂಜೆ ಮಾಡಿ ಯಥಾಶಕ್ತಿ ದಕ್ಷಿಣೆಕೊಟ್ಟು ಗಾಜಿನ ದೊನ್ನೇಲಿ ತೀರ್ಥ ಕೊಟ್ಟಿದ್ರೆ ಈ ಅಪ್ಪಂಗೆ ಏನು ನಷ್ಟ ಆಗ್ತಿತ್ತು ? ಮಾತೆತ್ತಿದರೆ ಲೆಕ್ಕ ಕೇಳ್ತಾನೆ. ಒಳ್ಳೆ ಲೆಕ್ಕದ ಮೇಸ್ಟ್ರು ! ಹೋಗ್ಲಿ ಲಕ್ಷಗಟ್ಲೆ ಚೀಟಿಗಳ್ನಾದ್ರೂ ಪ್ರಿಂಟ್ ಮಾಡ್ಸಿ ಗಾಳೀಲಿ ಬಿಡೋಣ ಅಂದ್ರೆ ಆ ಪ್ರೆಸ್ ಪಾಟೀಲಪ್ಪ, ಅದೆಲ್ಲ ಆಗಾಕಿಲ್ಲ ಈಗ, ನೀನು ಆರ್ಡರ್ ಕೊಟ್ರೇನೇ ಪ್ರಿಂಟ್ ಮಾಡೋದು. ಹೆಸರು ಕುಲ ಇಲ್ಲದೆ ಚಚ್ತಿತಾ ಇದ್ದು ನೋಡು ಅದೆಲ್ಲ ಈಗ ಖೈದು. ನಿನಗಿಂತಲೂ ಮುಂಚೆ ನನ್ನ ಪ್ರೆಸ್ಸಿಗೆ ಬೀಗ

ಮುದ್ರೆ ಮಾಡಿ ಕಂಬಿ ಎಣಿಸೋಕೆ ಕರ್ಕೊಂಡು ಹೋಗ್ತಾರೆ ಅಂತಾನೆ ಅವಯ್ಯ" ಎಂದು ಸಂಗಪ್ಪನೇ ರೂಲ್ಸಿಲ್ಲ ಹೇಳ್ತಾ ಇದ್ದ "ಹೈಕಮ್ಯಾಂಡೇ ಈ ಸಲ ಹೆಚ್ಚು ಪ್ಲೋಸ್ಟರ್ ಪ್ರಿಂಟ್ ಮಾಡಿಸ್ಲಿಲ್ಲವಂತೆ, ನಂದೇನು ಬಿಡು" ಅಂತ ಕೇಳಿದವರಿಗೆಲ್ಲ ಸಮಾಧಾನ ಮಾಡ್ತಾ ಇದ್ದ.

ರಾಮಪ್ಪಂಗೂ ಎಲೆಕ್ಷನ್ ಪ್ರಚಾರದ ಬಗ್ಗೆ ಅಷ್ಟು ಉತ್ಸಾಹ, ಖುಶಿಕಾಣಿಸ ಲಿಲ್ಲ. ಎಲೆಯಡಿಕೆ ಹಾಕ್ಕೊಂಡು ಅವನು ಶುಕ್ರವಾರದ ಸಂತೇಲಿ ಥೂ, ಥೂ ಅಂತ ಮಾಡ್ತಾ ಇದ್ದ ಭಾಷಣಕ್ಕೆ ಅವನ ಏಜೆಂಟರುಗಳು ಕಡೆಯಪಕ್ಷ ಆರು ಲಾರಿ ಜನಗ ಳನ್ನ ತಲೇಗೆ ತರಾವರಿ ಕಿಮ್ಮತ್ತು ಕಟ್ಟಿ ಕೊಟ್ಟೋರು. ಬಿದ್ನೋರುಗಳಿಂದ ಹೋದ ಚುನಾವಣೇಲಿ ಸಾಗಿಸಿ ಕೊಂಡು ಬಂದು ಸಂತೇ ಮೈದಾನದಲ್ಲಿ ಕೆಡವಿ ಲಾರಿಗಳ್ನ ಹೊಡಕೊಂಡು ಹೋಗಿದ್ರು. ಈ ಚುನಾವಣೇಲಿ ಲಾರಿಜನಗಳೂ ಇಲ್ಲ! ಎಂಜ್ಲೆಲೆ ಗುಡ್ಡೇನೂ ಇಲ್ಲ! ರಾಮಪ್ಪ ಹೇಳ್ತಾನೆ; "ನಂಗೆ ಅನ್ನದಾನದ ಪುಣ್ಯ ಇಲ್ಲದ ಹಾಗೆ ಮಾಡಿದನಲ್ಲಪ್ಪ ಆ ಮಹರಾಯ" ಅಂತ! "ಎಲೆಕ್ಷನ್ನೆ ಖಾಯಂಗುತ್ತಿಗೇಗೆ ತೊಗೊಂಡಿರೋ ದೊಡ್ಡ ದೊಡ್ಡ ಪುಕ್ಡಾಗಳೇ ಈಗ ಅಲ್ಲಾಡ್ತಿದಾರಂತೆ, ಬೆಂಗ್ಳೂರಲ್ಲಿ ಮಾತಾಡ್ಕೋತಾ ಇದ್ರಪ್ಪ" ಅಂತ ಷಹರಿನಿಂದ ಬಂದಿದ್ದ ಬಾಲದ ಬಸ್ಯ ಸುದ್ದೀಗೆ ಖಾರ ಹಚ್ಚಿ ಹೇಳ್ತಾ ಇದ್ದ. ರಾಮಪ್ಪಂಗೂ ಭಯ ಖರ್ಚು ಮಾಡೋದ, ಬಿಡೋದ ಅಂತ. "ಒಳ್ಳೆ ಪೀಕಲಾಟ ಆಯ್ತಲ್ಲ. ನಮ್ಮ ಸಂದೇಸಾನ ಜನಗಳ್ಗೆ ಮುಟ್ಸೋಕೆ ನಾವು ಒಳ್ಳೊಳ್ಳೆ ಅಕ್ಷರಗಳಲ್ಲಿ ಗೋಡೆ ಮೇಲೆ ರಾತ್ರಿನ್ ರಾತ್ರಿ ಬರಸಿದ್ರೆ ಬೆಳಕು ಹರಿಯೋದ್ರಲ್ಲಿ ಸುಣ್ಣದ ಪಟ್ಟಿ ಬಳಿದು ಕಿಲೀನ್ ಮಾಡ್ತಾ ಇದಾರಲ್ಲ. ಇದು ಭೂತದ ಕೆಲ್ಸ ಅಲ್ವೇನ್ರೊ" ಅಂತ ರಾಮಪ್ಪ ಗೊಣಗಿದ, ಸಂಗಪ್ಪನ ಕಡೆಯುವರು ಒಂದು ಭಾರಿ ಕಟ್ ಓಟ್ ಇಟ್ಟಿದ್ದರು ಗಡಿಯಾರದ ಗೋಪ ರದ ಮೇಲೆ ಅದು ರಾತ್ರೀನೇ ಔಟ್ ಆಗಿ ಸ್ಮಶಾನದಲ್ಲಿ ಬಿದ್ದಿತ್ತಂತೆ! ಈ ಸುದ್ದಿನ ರಾಮಪ್ಪನ ಏಜೆಂಟು ಮುಟ್ಟಿಸಿದಾಗ "ಹೋಗ್ಲಿ ಬಿಡ್ಲ ನಮ್ಮ ಕಟ್ ಔಟ್‌ಗೆ ಇನ್ನೊನು ಮರ್ಯಾದೆ ಸಿಕ್ಕೀತು. ಆ ಮಹಾತಾಯಿ ಕಟ್‌ಓಟ್ನೇ ಈಗ ಯಾರು ಇಟ್ಟಿಲ್ಲ. ಆ ಪೈಂಟರ್ ಶೋಲ್ಲು ಮಣೀನ ಊರಿಗೆ ಕಳ್ಸು ಅಂತ ರಾಮಪ್ಪ ಹೇಳುತ್ತಾ ತಲೆ ಮೇಲೆ ಕೈ ಇಟ್ಟುಕೊಂಡ ಶೊಲ್ಲುಮಣಿ ಬ್ರಷ್‌ಬಿಸಾಕಿ ತಿರುಚೂರ್‌ಗೆ ರಾತ್ರಿ ರೈಲಿನಲ್ಲೇ ಹೊರಟು ಹೋದ.!

ಇತ್ತ, ಸಂಗಪ್ಪಂಗೂ ತೃಪ್ತಿ ಇಲ್ಲ, ರಾಮಪ್ಪಂಗೂ ತೃಪ್ತಿಇಲ್ಲ. ಪುರಿಯಾಳು ಗಳಿಗೇ ಹುರುಪು ಇಲ್ಲ ಅಂದ್ರೆ ಅವರ ಇಷ್ಟ ಮಿತ್ರರಗತಿ ? ಏಜೆಂಟರಿಗೆ ಅಡ್ವಾನ್ಸ್, ಟಿ. ಎ. ಡಿ. ಎ. ಪಾರ್ಟ್ ಪೇಮೆಂಟು ಎಲ್ಲಾ ಖತಂ ಪಂಚೆಸೀರೆ ಖೋತ! ಸೋಡ, ಕೊಕೋ ಕೊಲ ಖೋತಾ ! ಕಾಫಿ, ಟೀನೂ ಅಷ್ಟಕ್ಕಷ್ಟೆ ಅಂದ ಮೇಲೆ ಪೋಳಿಗೆ, ಕೋಳಿಗೆ ಬರೀಕನಸಾಯ್ತು ಕ್ಷೇತ್ರದ ಕೊರಮರಿಗೆ !

ಊರು ಸುತ್ತೀ ಸುತ್ತೀ ಕಂಬಳಿ ಹೊದ್ಕೊಂಡು ಬಂದೇ ಬಂದ ಹೋಲ್ ಸೇಲ್ ವ್ಯಾಪಾರದ ಮರಿನುಂಗಣ್ಣ ! ರಾಮಪ್ಪಂಗೆ ಅಡ್ಡ ಬಿದ್ದು ನಮ್ಕಡಿ ಇಷ್ಟು ವೋಟೈತೆ, ನಮ್ಮೂರು ಕೇರಿವೋಟು ಉಂಡೆಯಾಗಿ ನಿಮಗೇ ಕೊಡಿಸ್ತೀನಿ. ರೇಟ್ ಫಿಕ್ಸ್ ಮಾಡಿ, ಸಂಗಪ್ಪ ಹೇಳಿ ಕಳಸವ್ನೆ, ನೀವು ಅಂದ್ರೆ ನಮ್ಗ ದೇಶಕ್ಕೆ ಸ್ವಾತಂತ್ರ್ಯ ಬಂದಾಗ್ಲಿಂದ ಭೋ ವಿಶ್ವಾಸ ಅಂತ ಹೇಳಿ ಕೋಲಿಟ್ಟ ಕೆಳ್ಗೆ. ಬೆಂಗಳೂರಿನಿಂದ ಬಂದಿದ್ದ ಬಸ್ಯ, ರಾಮಪ್ಪನ ಇಂಗಿತ ಅರಿತು "ನಮ್ಮ ದುಡ್ಡು ನಮ್ಮ ಬುರುಡೆ ಅನ್ನೋಕಾಲ ಹೋಯ್ತಲ. ಹುಷಾರಾಗಿರ್ಬೇಕು. ಪಂಚೆಗಿಂಚೆ ಅಂತ ಹೋಗಿಯ, ಕಚ್ಚೆ ಹರಿದಾಕ್ತಾನೆ ಆಹಾರವಯ್ಯ, ಜೋಪಾನ, ಹೋಲ್ ಸೇಲ್‌ಮಳಿಗೆ ಈ ಸಲ ಬಂದ್ ಆಗುಯ್ತೆ ! ಎಳಲಾ ಮೇಲಕ್ಕೆ" ಅಂತ ಹೇಳಿ ಮರಿನುಂಗಣ್ಣ ಪ್ಲಾನಿಗೆ ಬೆಂಕಿ ಇಟ್ಟ. ರಾಮಪ್ಪನ ಸ್ಥಿತೀನ ಸೂಕ್ಷ್ಮವಾಗಿ ಅರ್ಥಮಾಡಿಕೊಂಡು "ಹೋಗ್ಲಿ ಬೋನಸ್ಸು ಅಂತ ಏನಾದ್ರೂ ಕೊಡೇಣ, ಸರ್ಕಾರಾನೇ ಬೋನಸ್ಸು ಕೊಡುತ್ತಲ್ಲ" ಎಂದ ವೇಗರವಳ್ಳಿ ಬಳಪದ ಕಾರ್ಖಾನೆ ಮಾಲೀಕ ಕೊಟ್ರ ಬಸಪ್ಪ, ಸುದ್ದಿ ಸಂಗಪ್ಪಂಗೆ ತಿಳೀತು. ಮೇಲಕ್ಕೆ ದೂರು ಹೋಯ್ತು "ಇಬ್ಬರ್ನೂ ಒಳಕ್ಕೆ ಹಾಕ್ತೀವೆ ಹಾಗೇನಾದ್ರೂ ಮಾಡಿದ್ರೆ-ಹುಷಾರ್ !" ಅಂತ ಸೂಚನೆ ಇರೋ ಎಚ್ಚರಿಕೆ ಪತ್ರ ತಲುಪಿತು. ಗಡಗಡ ಅಂತ ನಡುಗ್ತಾ ಅದನ್ನೂ ಕ್ಯಾನ್ಸಲ್ ಮಾಡಿದ್ರು.

ಇಬ್ಬರಿಗೂ ಇದ್ದಷ್ಟು ತಲೆ ಕೆಟ್ಟಿತು. ಮರ್ಯಾದೆ ಪ್ರಶ್ನೆ ! ವೇಗರವಳ್ಳಿ ರಾಜ ಕೀಯದಲ್ಲಿ ನಾಯಕತ್ವದ ನಿರ್ಣಾಯಕ ಪ್ರಶ್ನೆ ! ಗೆದ್ದರೆ ಅಸೆಂಬ್ಲಿ ಸೋತರೆ ಅಂಬ್ಲಿ ! ಎಲೆಕ್ಷನ್ ಮೂರೇ ದಿವ್ಸ ಉಳ್ಕೋತು. ಅಂತ್ಯ ಕ್ರಿಯೇಗೆ ಬರೋ ಹಾಗೆ ನಾಲ್ಕು ನಾಲ್ಕು ಜನ ಕಾಣಿಸಿಕೊಳ್ತಾ ಇದ್ದರು ಉಮೇದು ವಾರರ ಹಿಂದೆ ಮುಂದೆ ! ಹೋದ ಚುನಾವಣೆಯಲ್ಲಿ ಸಂಗಪ್ಪಂಗೆ ದೊಡ್ಡ ಬೀರೇ ದೇವರ ಮಠದ ಬೆಂಬಲವೂ ರಾಮಪ್ಪ ನಿಗೆ ಚಿಕ್ಕ ಬೀರೆ ದೇವರ ಮಠದ ಬೆಂಬಲವೂ ಜೋರಾಗಿತ್ತು. ಎರಡೂ ಮಠದ

ಮಠಿಸ್ವಾಮಿಗಳು ಪ್ರೆಸ್ ಸ್ಟೇಟ್‌ಮೆಂಟನ್ನು ಹೊರಡಿಸಿದ್ದರು. ಈ ಸರ್ತಿ ಮಠದ ವರು ಬೀದಿಗೆ ಬರಲಿಲ್ಲ. ದೇವರಿಗೆ ಒಳ್ಳೆ ಬುದ್ಧಿ ಬರ್‍ತಾ ಇದೆ ಅಂತ ಬುದ್ಧಿ ಜೀವಿ ಗಳು ಕುಹಕ ಆಡಿದರು.

ಅಂತೂ ವೇಗರವಳ್ಳಿಯಲ್ಲಿ ಚುನಾವಣೆ ರಂಗು ಸಾಕಷ್ಟು ಏರಲಿಲ್ಲ! ಜಟ್ಕಾ ಗಳ ಬೆನ್ನಿಗೆ ಪೋಸ್ಟರುಗಳನ್ನೂ ಯಾರೂ ಹಚ್ಚಲಿಲ್ಲ. ಇದ್ದ ಮೂರು ಜಟ್ಕಾ, ಹದಿನೆಂಟು ಆಟೋಗಳಿಗೂ ಎಲೆಕ್ಷನ್ ಡಿಮ್ಯಾಂಡ್ ಇಲ್ಲ. ಮೈಕಿನವರು ಮುಂಡು ಮೋಚಿಕೊಂಡರು. ಬಿಟ್ಟಿ ಅರವಟಿಗೆ ಸೇವೆ ಖತಂ. ಭಟ್ಟೀನೂ ಇಲ್ಲ. ! ಬಾಟ್ಲೂ ಇಲ್ಲ! ಇದೆಂಥ ಎಲೆಕ್ಷನ್ ಬಿಡ್ಲ. ಕಾಲ ಕೆಟ್ಹೋಯ್ತು" ಅಂತ ಲಿಕ್ಕರ್ ಕಾಂಟ್ರಾ ಕ್ಟರುಗಳು ಸೊರಗಿ ಸುಸ್ತಾದರು. ಎರಡೂ ಕ್ಯಾಂಪುಗಳಲ್ಲಿ ಏನಾದ್ರು ಮಾಡಿಬಿಸಿ ಏರಿಸಬೇಕೂಂತ ರುಚಿ ಕಂಡಿದ್ದ ಏಜೆಂಟರುಗಳು ಕಿತಾಪತಿಮಾಡ್ತಾ ಬೆಂಕಿ ಹಚ್ಚೋಕೆ ಹವಣಿಸ್ತಾನೇ ಇದ್ದರು. ಕಲಿತ ಚಾಳಿ. ಸುಲಭವಾಗಿ ಎಲ್ಲಿ ಬಿಟ್ಟಾರು.

ಅಂತೂ ಬಹಿರಂಗ ಪ್ರಚಾರ ಮುಗಿಯಿತು. ಅಂತರಂಗ ಪ್ರಚಾರಕ್ಕೆ ಎರಡೂ ಗುಂಪಿನವರು ಊರಿನಲ್ಲಿ ಫೈನಲ್ ರೌಂಡ್ ಹೊರಟರು. ವೋಟುಗಳ್ನ ಗಟ್ಟಿಮಾಡಿ ಕೊಳ್ಳೋಕೆ, ಮನೆಮನೆ ಪ್ರಚಾರಕ್ಕೆ, ಅಗ್ರಹಾರ ಬಣಜಿಗರಕೇರಿ ಮುಗಿಸಿಕೊಂಡು ಎರಡೂ ಗುಂಪಿನವರು ತಮ್ಮ ನಾಯ್ಕರನ್ನು ಸುತ್ತುಗಟ್ಟಿಕೊಂಡು ಚಡಪಡಿಸುತ್ತಾ ಚಿನುಕುರಳಿಪಟಾಕಿ ಸಮೇತ ಮಾರ್ಕೆಟ್ ಬಳಿ ಇದ್ದ ಗಾಂಧಿ ಪ್ರತಿಮೆ ಹತ್ತಿರ ಬಂದು ಸೇರಿದರು. ಗಾಂಧಿ ಪ್ರತಿಮೆಗೆ ಹಾರ ಹಾಕಿ ಆಶೀರ್ವಾದ ಪಡೆಯೋ ಉದ್ದೇಶ ಜನಗಳ ಮುಂದೆ! ಆಗಲೇ ಒಂದೊಂದು ಒಡಕುಮಾತು ಎರಡೂಕಡೆ ಕೇಳಿ ಬಂತು ಸೊಸೈಟೀಗೆ ಬೆಂಕಿ ಇಟ್ಟಿದ್ದು, ಬ್ಯಾಂಕ್ ಸಾಲದಲ್ಲಿ ಕಮೀಷನ್ ಹೊಡೆದಿದ್ದೂ ವಗೈರೆ ಸಹಸ್ಯಗಳು ಬಯಲಾಗುತ್ತಿದ್ದವು. ಯಾರೋ ಚಿನಕುರಳಿ ಪಟಾಕಿಗೀಚೀದರು! ಪ್ರಾರಂಭವಾಯ್ತು ಮಾತಿನ ಯುದ್ಧ! ಒಳಗಿದ್ದಿದ್ದೆಲ್ಲ ವಾಂತಿ ಬಂದ ಹಾಗೆ ಬರೋಕೆ ಶುರುವಾಯ್ತು. ಸಂಗಪ್ಪ, ರಂಗಪ್ಪ ಇದನ್ನೆಲ್ಲ ನೋಡ್ತಾ, ಕೇಳ್ತಾ ತೆಪ್ಪಗೆ ಹೆಂಗಿ ರ್‍ತಾರೆ. ! ಅಂತ ರಂಗದ ಪ್ರಚಾರ ತಾನೆ! ವೇಗರವಳ್ಳಿ ಗ್ರಾಮಭಾಷೇಲೇ ಪ್ರಾರಂಭಿಸಿ ದರು. ಜನಗಳಿಗೆ ತಿಳಿಯ ಬೇಕಲ್ಲ!

"ಕೆರೆಬೀದಿ ನಿಂಗಕ್ಕ ಹೇಳಿದ್ದು ಗೊತ್ತಾಯ್ತಲೇ ರಾಮಪ್ಪ, ಮನೆಹಾಳ ನೀನು" ಎಂದ ಸಂಗಪ್ಪ.

"ನಂಗೂಗೊತ್ತಾಯ್ತಲೆ, ಸಂತೇಲಿ ದೊಡ್ಡರಂಗಿ ನಿನ್ನ ಜುಟ್ನ ಗುಂಜಾಡಿದ್ದು ನಿನ್ನ ಮನೆ ಎಕ್ಕ ಹುಟ್ಟ" ಎಂದ ರಾಮುಪ್ಪ. ಹೋ ಎಂದರು ಎರಡೂ ಕಡೆಯುವರು "ಒದೀರ್ರೋ ಮಕ್ಕಳ್ನ" ಅಂತ ಮೂಲೆ ಮೂಲೆಯಿಂದಲೂ ಬಂತು ಆದೇಶಗಳು. ರಾಮುಪ್ಪ ಸಂಗಪ್ಪಂಗೆ ಸಂಗಪ್ಪ ರಾಮುಪ್ಪಂಗೆ ಥೂ ಥೂ ಅಂತ ಉಗಿದರು. ಕೈ ಕೈ ಮಿಲಾಯಿಸೋ ಹಂತಕ್ಕೆ ಬಂತು. "ನೀನು ಮಾಡಿರೋ ಹಲ್ಕಾ ಕೆಲಸಕ್ಕೆ ಮೆಟ್ನಲ್ಲಿ ಹೊಡೀಬೇಕ್ಲ" ಎಂದ ಸಂಗಪ್ಪ "ನೀನು ಮಾಡಿರೋ ಹಾದರಕ್ಕೆ ಬೂಡ್ಸ್‌ನಿಂದ ಬಾರಿಸಬೇಕ್ಲ" ಎಂದ ರಾಮುಪ್ಪ.

ಒಂದು ನೂರು ಜೊತೆ ಪಾದರಕ್ಷೆಗಳು, ಗಿರ್ಕಿಚಡಾವುಗಳು ಮೇಗರವಳ್ಳಿ ವಾಯು ಮಂಡಲದಲ್ಲಿ ವಿರಾಜಿಸಿದವು! ಪರಿಸ್ಥಿತಿ ಹದಗೆಟ್ಟಿತು. ರಾಮುಪ್ಪ ಕೈಗೆ ಬಾಟ ತೊಗೊಂಡ! ಸಂಗಪ್ಪ ಖಾದಿ ಗ್ರಾಮೋದ್ಯೋಗ ಭಂಡಾರದ ಚಪ್ಪಲಿಗಳನ್ನು ತೊಗೊಂಡ. ಅವರವರು ಮೆಟ್ಟಿದ್ದೇ! ಕೋಪ ಇಬ್ಬರಿಗೂ ಶಿಖರಕ್ಕೇರಿತು. ಆದರೆ ಅದೇನು ಮಾಯೆಯೋ ವಿಧಿ ಲೀಲೆಯೋ, ಸಂಗಪ್ಪ ಮರು ಕ್ಷಣದಲ್ಲಿಯೇ ಶಾಂತ ಚಿತ್ತನಾಗಿ ಬಿಟ್ಟ! ರಾಮುಪ್ಪ ಎರಡು ಬಾರಿಸೇ ಬಿಟ್ಟ ಸಂಗಪ್ಪಂಗೆ ಆ ಕಾವಿನಲ್ಲಿ ಸಂಗಪ್ಪ ಏಟಿಗೆ ಮೈ ಒಡ್ಡುತಾ ಗಾಂಧೀಜಿ ಹೇಳಿದ್ದನ್ನು ಪ್ರತ್ಯಕ್ಷವಾಗಿ ಪ್ರಮಾಣೀಕರಿಸಿ ಜನಗಳಿಗೆ ತೋರಿಸಿ ಬಿಟ್ಟ ಆಕ್ಷಣದಲ್ಲಿ. ಎಲೆಕ್ಷನ್‌ಲಿ ಹಿಂದೆಲ್ಲ ದೊಡ್ಡ ದೊಡ್ಡ ಮನುಷ್ಯರು ಹೇಗೆಲ್ಲಾ ಗೆಲ್ತಾಇದ್ರು ಅನ್ನೊ ವಿಚಾರಗಳೆಲ್ಲ ತಿಳಿದಿದ್ದವ ಸಂಗಪ್ಪ. ಅವರ ಗುಟ್ಟಿನ ಕಥೆಗಳೆಲ್ಲ ಅರಿತಿದ್ದವ. ಅದಕ್ಕೆ ರಾಮುಪ್ಪ ಗುಜ್ಜು ಹೆಜ್ಜೆ ಹಾಕುತ್ತಾ ಪಾದರಕ್ಷೆಗಳನ್ನು ಮೇಲಕ್ಕೆತ್ತಿದಾಗಲೂ ಸಂಗಪ್ಪ ಅವನ ಮೇಲೆ ಕೈಮಾಡಲಿಲ್ಲ. ಕೂಲಾಗಿ ತೊಗೊಂಡ! ಹಾಗೆ ನೋಡಿದರ ಸಂಗಪ್ಪನದು ಒರಟು ಚಡಾವುಗಳು. ಹಳ್ಳೀ ಕಡೇದು ಇನ್ನೂ ಬಲವಾಗೇ ಹಾಕಬಹುದಾಗಿತ್ತು. ಆದರೆ ಸಂಗಪ್ಪ ಹಾಗೆ ಮಾಡದೆ ರಾಮುಪ್ಪಂಗೇ ಆಹ್ವಾನವನ್ನು ಕೊಟ್ಟ. ರಾಮುಪ್ಪ ದುಡಿಕಿದ, ನಿಮಿಷದಲ್ಲಿ ಕಥೆ ಮುಗಿದೇ ಹೋಗಿತ್ತು. ಎರಡು ಗುಂಪಿನವರೂ ಅಬ್ಬರಿಸುತ್ತಾ ಒಂದಿಷ್ಟು ಕೂಗಾಡಿಕೊಂಡರು. ಪೋಲೀಸನವರು ಬಂದು ಎಲ್ಲರನ್ನೂ ಥಳಿಸಿ ಮನೇಗೆ ಕಳ್ಸಿದ್ರು. ಊರು ಮಾಮೂಲು ಸ್ಥಿತೀಗೆ ಬಂತು.

ಎಲೆಕ್ಷನ್ ಮುಗಿದು ಎಣಿಕೆ ದಿವ್ಸ ಬಂತು. ಎಲ್ಲೆಲ್ಲೂ ಟೆನ್ಷನ್, ಪೋಲೀಸ್, ಕಾವಲು, ಫಲಿತಾಂಶ ಸಾರಿದರು. ಸಂಗಪ್ಪಗೆದ್ದ! ರಾಮುಪ್ಪ ಸೋತ! ಊರಿನ ಜನ

ಗಳು ಕೇಕೆಹಾಕ್ಕೊಂಡು ಹಿಟ್ಟು ಅಂಬ್ಲಿ ನೋಡೋಕೆ ಮನೆ ಕಡೆ ಹೊರಟರು. ಮೂರನೆದಿವಸ ಸುದ್ದಿ ಪೇಪರುಗಳಲ್ಲಿ ದಪ್ಪಕ್ಷರದಲ್ಲಿ ಬಂದಿತ್ತು. ಸಂಗಪ್ಪನ ಗೆಲುವಿನ ಕಾರಣಗಳನ್ನು ಕಾಂಪ್ಯೂಟರ್‌ನಲ್ಲಿ ವಿಶ್ಲೇಷಿಸಿ ಕೊಟ್ಟಿದ್ದರು. ಅವರು ಕೊಟ್ಟಿದ್ದ ಕಾರಣಗಳು.

1) ಸಂಗಪ್ಪನು ಚಪ್ಪಲಿ ಏಟು ತಿಂದಿದ್ದರಿಂದ ಊರಿನ ಸಿಂಪತಿ ಅವನ ಕಡೆಗೆ ತಿರುಗಿ ಅವನಿಗೇ ಹೆಚ್ಚು ವೋಟುಗಳು ಬಂತು. ಅದೇ ಸಿಂಪತಿ ವೋಟುಗಳು !

2) ರಾಮಪ್ಪನಿಗೆ ಎಲೆಕ್ಷನ್ ವ್ಯವಹಾರ ಅಷ್ಟು ತಿಳಿಯದು. ಹಿಂದಿನವರ ಚರಿತ್ರೆಗಳನ್ನು ಅವನು ಅಷ್ಟಾಗಿ ವ್ಯಾಸಂಗ ಮಾಡಿಲ್ಲ.

3) ಸಂಗಪ್ಪ ಆ ದುರಂತದ ದಿನ ಖಾದಿ ಗ್ರಾಮೋದ್ಯೋಗ ಭಂಡಾರದ ಚಡಾವುಗಳನ್ನು ಮೆಟ್ಟಿದ್ದು ಅವನಲ್ಲಿ ಒಂದು ಭಾವಾತ್ಮಕ ಬದಲಾವಣೆ ಆಗಲು ಕಾರಣವಾಯಿತು. ಗಾಂಧೀಜಿಯವರ ಆಶೀರ್ವಾದ ಅವನಿಗೆ ಸಿಕ್ಕಿತ್ತು. ಆದರ್ಶವನ್ನು ಮೆಟ್ಟಿನಿಂತಿದ್ದ

4) ಪಾದರಕ್ಷಾ ಪ್ರಯೋಗವಾದರೆ ಏಟು ತಿಂದವನಿಗೆ ಅದೃಷ್ಟ ಖುಲಾಯಿಸುವುದೆಂಬ ಪ್ರಾಚೀನ ಸಂಸ್ಕೃತಿಯ ರಹಸ್ಯ ಸಂಗಪ್ಪನಿಗೆ ಗೊತ್ತಿತ್ತು. ಅದಕ್ಕೆ ರಾಮಪ್ಪ ಬಾರಿಸಲಿ ಎಂದು ಅವನು ತವಕ ಪಡುತ್ತಿದ್ದುದು. ರಾಮಪ್ಪಂಗೆ ವ್ಯವಹಾರ ಜ್ಞಾನವಿಲ್ಲ. ಸಂಗಪ್ಪನಿಗೆ ಸಾಕಷ್ಟು ಪ್ರಚೋದನೆಯನ್ನು ಒದಗಿಸದೆ ಮೂಢನಾದ, ಮಾನ ಮರ್ಯಾದೆಗಳೇ ಅವನಿಗೆ ದೊಡ್ಡದು ಎಂದು ಭಾವಿಸಿದ ಅವನ ಸೋಲಿಗೆ ಅದೇ ಪ್ರಧಾನವಾದ ಕಾರಣ.

ಹಂಸ ಗೀತೆ

ಅ. ರಾ. ಮಿತ್ರ

ಹಾಡಿದ ಮೇಲೆ ಹಂಸ ಸಾಯುತ್ತಂತಲ್ಲ
ಅದೇ ಹಂಸ ಗೀತೆ

ಹಾಡಿದ ಕೂಡಲೆ ಭಾವ ಸಾಯುತ್ತಲ್ಲ
ಅದೇ ಭಾವ ಗೀತೆ ?

"ಸನ್ಯಾಸಕ್ಕೆ ಅಮೂಲ್ಯ ಸಲಹೆಗಳು"

ಎಂ. ಎನ್. ಕೆ.

ಮೊನ್ನೆ ತುಂಬಾ ಬೇಜಾರಾಗಿತ್ತು. ಮಾಡಿದ ಕೆಲಸ ಎಲ್ಲಾ ಉಲ್ಟಾ ಪಲ್ಟಾ. ಒಂದೂ ನೆಟ್ಟಗಾಗಲಿಲ್ಲ. Customers ಎದ್ವಾ ತದ್ವಾ ಬೈದಿದ್ದರು. ಹಾಳಾಗಲಿ ಎಂದು ಫ್ಯಾಕ್ಟರೀ ಬಿಟ್ಟು ಬೇಗ ಮನೆ ಕಡೆಗೆ ಕಾರು ಓಡಿಸಿದೆ. ಮಧ್ಯ ರಸ್ತೆಯಲ್ಲಿ ಎದೆ ಧಸ್ಸಕ್ಕೆಂದಿತು. ಟ್ರಾಫಿಕ್ ಜಾಮ್, ಮಾನ್ಯ ಕೊದಂಡ ರಾಮಯ್ಯನವರು "ಇದೆಲ್ಲಾ Birth pangs, ಸರಿಹೋಗುತ್ತೆ" ಎಂದು ಕೊಟ್ಟ ಹೇಳಿಕೆ ಬೆಳಗಿನ ಪೇಪರ್‌ನಲ್ಲಿ ಓದಿದ ಜ್ಞಾಪಕ ಬಂತು. ಬರ್ತ್‌ಪ್ಯಾಂಗ್ ಸರಿ, ಡೆಲಿವರಿಯಾವಾಗ ಎಂದು ಕಾದು ನೋಡಿದ ಮೇಲೆ ಡೆಲಿವರಿಗೆ ಸುಮಾರು ಒಂದೂವರೆ ಗಂಟೆಯಾಯಿತು. ಇದರಿಂದ ಮನಸ್ಸಿನ ದುಗುಡ ಮತ್ತಷ್ಟು ಹೆಚ್ಚು ಮನೆಸೇರುವ ವೇಳೆಗೆ ಎಲ್ಲರ ಮೇಲೂ ಕೂಗಾಡುವ ಸ್ಥಿತಿಗೆ ಬಂದಿತ್ತು.

ಮನೆಯಲ್ಲಿ ಬಂದ ಪೋಸ್ಟ್ ನೋಡಿದೆ. ಎಲ್ಲಾ Bill ಗಳೇ. ಕ್ರೆಡಿಟ್ ಕಾರ್ಡ್ ಇದೆ ಎಂದು ವಾರವಾರವೂ ಸಿಕ್ಕಿದ ಹೋಟೇಲ್‌ಗಳಿಗೆ ಧಾಳಿ ಇಟ್ಟು ಎದ್ವಾ ತದ್ವಾ ತಿಂದು ಜಂಭವಾಗಿ ಸೈನ್ ಮಾಡಿ ಬಂದ ಫಲ ಅನುಭವಕ್ಕೆ ಬಂದಿತ್ತು, "ಸಾಲವನು ಕೊಂಬಾಗ ಹಾಲೋಗರುಂಡಂತೆ, ಸಾಲಿಗನು ಬಂದು ಸೆಳೆವಾಗ ಕಿಬ್ಬದಿಯ ಕೀಲುಮುರಿದಂತೆ ಸರ್ವಜ್ಞ" ಎಂದು ನಮ್ಮ ಗಮಕಿ ಮಾಸ್ತರು ರಾಗವಾಗಿ ಹಾಡುತ್ತಿದ್ದುದು ಜ್ಞಾಪಪಕ್ಕೆ ಬಂದು ಎಲ್ಲಾ ಬಿಲ್‌ಗಳನ್ನು ಪಕ್ಕಕ್ಕೆ ತಳ್ಳಿ ಕ್ಲಬ್ ಕಡೆಗೆ ಹೊರಟೆ. ಬುರು ಬುರು ನೊರೆ ಹೀರಿದರೆ ಸ್ವಲ್ಪ ಕೋಪ ತಣ್ಣಗಾಗುವ ಆಶೆ. ಕ್ಲಬ್ಬಲ್ಲಿ ನಮ್ಮ ಗುಂಪು ಆಗಲೇ ಹಾಜರಾಗಿ ಒಂದೆರಡು ರೌಂಡ್ ಮುಗಿದಿತ್ತು. ಖಾಲಿ ಕುರ್ಚಿ ಎಳೆದುಕೂತು ಒಂದು ಬಾಟಲ್ ಬೀರಿಗೆ ಕೂಗಿ ಹೇಳಿ ಬೇರೆಯವರು ತರಿಸಿದ್ದ ಮಸಾಲಾ ಬಟಾಣಿಯನ್ನು ಮುಷ್ಟಿ ಪೂರ್ತಿ ತಗೆದುಕೊಂಡು ಬಾಯಾಡಿಸಲು ಶುರು ಮಾಡಿದೆ. ಏನೂ ಮಾತಾಡದೆ ಶೂನ್ಯದತ್ತ ದೃಷ್ಟಿ ಹಾಯಿಸಿದೆ. ಕೆಲವು ಕ್ಷಣಗಳಾದ ಮೇಲೆ ಗೋಪಾಲ ಶುರುಮಾಡಿದ ಮಾತಿಗೆ. ಅವನು ಆಗಲೇ ಎರಡು ಸ್ಮಾಲ್ ಖಾಲಿ ಮಾಡಿ ಮೂಡಿಗೆ ಬಂದು ಬೇರರ್ ತಂದಿಟ್ಟ Large ಗೆ ಸೋಡಬೆರಿಸುತ್ತಾ ನನ್ನನ್ನು ಉದ್ದೇಶಿಸಿ" ಯಾಕೋ ಬೆಪ್ಪೇ ತುಂಬಾ ಬಿಗುಂ ಆಗಿದ್ದಿಯಾ ?, ಅಶ್ವಮೇಧದಲ್ಲಿ (ರೇಸ್) ದುಡ್ಡು ಹೋಯಿತಾ ಇಲ್ಲ ಬಾಸ್ ಉಗಿದರಾ" ಎಂದ. ಅಷ್ಟರಲ್ಲಿ ಬಂದ ಬೀರಿನ ಗ್ಲಾಸಿನಿಂದ ಒಂದು ಗುಟುಕು ಹೀರಿ "ಇವತ್ತು

ಮಾಡಿದ್ದೆಲ್ಲಾ ಹಾಳು. ಎಲ್ಲರಿಂದಲೂ ಬೈಗುಳ, ಕೈ ಹಾಕಿದ ಕೆಲಸವೆಲ್ಲಾ ಎಡವಟ್ಟು. ದಿಕ್ಕೇ ತೋಚ್ತಿಲ್ಲ. ಎಲ್ಲಾದರೂ ಹೋಗಿ ಸನ್ಯಾಸ ತೊಗೊಂಡು ಹಿಮಾಲಯಕ್ಕೋ ಸುಮಗಾಡಿಗೋ ಹೋಗೋದ್ವಾಸಿ" ಎಂದೆ.

ಇದರಿಂದಾದರೂ ಕನಿಕರ ತೋರಿ ಯಾರಾದರೂ ನನ್ನ ಮುಂದಿನ ಬೀರ್ ಬಾಟಲ್ ಆರ್ಡರ್ ಮಾಡ್ತಾರಾಂತ ನೋಡಿದೆ. ಅಂಥದ್ದೇನೂ ಕಾಣಲಿಲ್ಲ. ಒಬ್ಬರು ಮುಖ ಇನ್ನೊಬ್ಬರು ನೋಡಿ ಮುಸಿ ನಕ್ಕರು. ಗೋಪಾಲ ಕಣ್ಣುಹೊಡೆದು ತಲೆ ಆಲ್ಲಾಡಿಸಿದ್ದು ಆ ಅರೆ ಮುಸುಕಿನಲ್ಲಿ ಸ್ಪಷ್ಟವಾಗಿ ಗೊತ್ತಾಯ್ತು. ಇವರೇನೋ ಪಿತೂರಿ ಮಾಡ್ತಾರೆ ಎಂಬ ಶಂಕೆ ಬಂತು.

"ಅಯ್ಯೋ ಪಾಪ, ಜೀವ ತುಂಬಾ ನೊಂದಿದೆ. ಸನ್ಯಾಸ ತೊಗೋಬೇಕಾದ್ದೇ. ಇಲ್ಲದಿದ್ದರೆ ಇನ್ನೇನೋ ಹೆಚ್ಚು ಕಡಿಮೆ ಮಾಡಿ ಕೊಂಡಾನು" ಎಂದು ಅನಂತ ಅನು ಕಂಪಿಸಿದ. ದುರುಗುಟ್ಟಿನೋಡಿದೆ. ಅವನು ನನ್ನನ್ನು ನೋಡುತ್ತಿರಲಿಲ್ಲ.

"ಅದ್ಸರಿ, ನೀನು ಸನ್ಯಾಸಿಯಾಗುವುದು ಈ ವರ್ಷವೋ ಇಲ್ಲ ಹೊಸ ವರ್ಷ ವಲ್ಲೋ ? ಇನ್ನೇನು ಉಗಾದಿ ಬಂತಲ್ಲಾ, ಜೋಯಿಸರು ಮುಂದಿನ ವರ್ಷವೇ ಇಂಥಾಕೆಲಸಕ್ಕೆ ಸೂಕ್ತ ಎನ್ನುತ್ತಿದ್ದರು," ಈ ಸಲಹೆಗಾರ ಗೋಪಾಲ, ಹೊಟ್ಟೆ ತುಂಬಾ ವಿಸ್ಕಿ ಇದ್ದರೂ, ಅವನ ಚೇಷ್ಟೆಗೆ ಕಡಿವಾಣ ಕಾಣಲಿಲ್ಲ.

"ಬೇಡ್ವೋ ಬೇಡ್ವೋ. ಈಗಲೇ ಬೇಡವೇ ಬೇಡ ಈ ವರ್ಷದ ಕೊನೇಲಾಗಲೀ, ಇಲ್ಲಾ ಮುಂದಿನ ಉತ್ತರಾಯಣದಲ್ಲಾಗಲೀ, ಭೀಷ್ಮಾಚಾರ್ಯರು ಆವಾಗಲೇ ಅಲ್ವಾ, ಪ್ರಾಣಬಿಟ್ಟಿದ್ದು. ನೀನೂ ಹಾಗೇಮಾಡು ಉತ್ತರಾಯಣದಲ್ಲೆ ಸನ್ಯಾಸ ತೊಗೊ ಅಷ್ಟರಲ್ಲಿ ನಿನಗೂ ಅರವತ್ತಾಗುತ್ತೆ. ಷಷ್ಠಿಪೂರ್ತಿ ಶಾಂತಿ ಮಾಡಿಸಿಕೊಂಡು, ನಮ ಗೆಲ್ಲಾ ಊಟಹಾಕಿಸಿ ಸನ್ಯಾಸತೊಗೊ. ಸನ್ಯಾಸಿ ಆದಮೇಲೆ ಶಾಂತಿ-ಗೀಂತಿ ಒಂದೂ ಇಲ್ಲ." ಈ ಪುರಾಣ ನಂಜುಂಡನಿಂದ. ಅಯ್ಯೊ ಪಾಪ ಒಂದೂ ಇಲ್ಲ, ಇವರಿಗೆಲ್ಲಾ ತಮಾಷೆ, ಬೆಕ್ಕುಗಳಿಗೆ ಚೆಲ್ಲಾಟ, ಇಲಿಗೆ ಪ್ರಾಣ ಸಂಕಟ, ಸಹಿಸಿದೆ. ಮೌನವಾಗಿ ಬೀರ್ ಹೀರುತ್ತಾ ಸಹಿಸಿದೆ. "ಅಂದಹಾಗೆ ಕಾವೀ ಬಟ್ಟೆಗೆ ಏನು ಅರೇಜ್ಮೆಂಟು ? ಬಿಳೀ ಬಟ್ಟೆಗೆ ಬಣ್ಣ ಹಾಕಿಸ್ತೀಯೋ ಹೇಗೆ. ನನ್ಕೇಳಿದ್ರೆ ರೆಡಿ ಮೇಡೇ ವಾಸಿ" ಈ ಅಂಬೋಣ ಮೂರ್ತಿದು, ನಿನ್ಯಾರ್ಕೇಳಿದ್ರು ಎನ್ನಬೇಕೆಂದುಕೊಂಡೆ, ಸಮಾಧಾನ ಮಾಡ್ಕೊಂಡೆ.

"ರೆಡೀಮೇಡ್ ಕೊಳ್ಳುವಾಗ ಹುಷಾರಪ್ಪ. ಹರೇ ಕೃಷ್ಣ ಅವರ ಹತ್ರಹೋದ್ರೆ ಅಲ್ಲಿಸಿಗೋದು ಕಚ್ಚೆ ಪಂಚೆ ಮಾತ್ರ. ನೀನು ಹೋಗೋದು ಹಿಮಾಲಯಕ್ಕೆ, ಅಲ್ಲಿಗೆ ಪಾಯಿಜಾಮ-ಜುಬ್ಬ ಸರಿಹೋಗುತ್ತೆ. ಅದು ಸಿಗೋದು ರಜನೀಶ್ ಆಶ್ರಮ ದಲ್ಲಿ, ನನ್ನ ಬ್ರದರ್ ಇನ್ ಲಾ ಪೂನಾದಲ್ಲಿದ್ದಾರೆ. ಅವರಿಗೆ ಹೇಳಿ ತರಿಸ್ಲಾ, ನಿನ್ನ ಸೈಜೇನು" ಇದು ರಾಘುವಿನ ಔದಾರ್ಯತೆಯ ಪರಮಾವಧಿ. ಸಧ್ಯ ಅಡ್ವಾನ್ಸ್ ಕೇಳ ಲಿಲ್ಲವಲ್ಲ. ನನ್ನ ಪುಣ್ಯ.

"ಹೇಗಿದ್ರೂ ಸನ್ಯಾಸಿ ಆಗ್ತೀಯ. ಸರ್ವವನ್ನೂ ಬಿಡಬೇಕಾಗುತ್ತೆ. ವಿಲ್ಲು-ಪಲ್ಲು ಮಾಡಿಟ್ಟು ಹೋಗು. ಇಲ್ದೇ ಇದ್ರೆ ನಿನ್ನ ನಂಬಿಕೊಂಡೋರ್ಗೆ ತೊಂದರೆ. ಹಾಗೇ ನಮ್ಮ ಕ್ಲಬ್ಬಿನ ಲೆಖ್ಖಾ ಚುಕ್ತಾ ಮಾಡಪ್ಪ, ಈಗಲೇ account uptodate ಮಾಡಿಸ್ಲಾ ?" ಈ ಪ್ರಶ್ನೆ ವಾಸುವಿನದು. ಅವನೇ ಕ್ಲಬ್ಬಿನ ಸೆಕ್ರೆಟರಿ, ಅವನ ಚಿಂತೆ ಅವನಿಗೆ.

"ಲೋ ತಲೆನುಣ್ಣಗೆ ಹೊಡಿಸ್ಬೇಡಾ ಸ್ವಲ್ಪಪಿಲ್ಲು ಜುಟ್ಟಿರಲಿ, ನಿನಗೆ ತುಂಬಾ ಒಪ್ಪುತ್ತೆ" ರಾಜುವಿನ ಕೇಶಾಲಂಕಾರದ ಸಲಹೆ ಸನ್ಯಾಸೀಗೇಕಯ್ಯ ಜುಟ್ಟು-ಪಟ್ಟು ಎಂದು ನಾನು ಕೇಳಲಿಲ್ಲ.

"ನೊಡಪ್ಪ ನೀನೂ ಸಾಕಷ್ಟು ಓದಿದೋನು ತಿಳುವಳಿಕಸ್ತ, ಪುರಂದರದಾಸರ ಮೇಲೆ ಬಹಳಷ್ಟು ಮಾತಾಡಿದ್ದೀಯ, ಅವರ ಹಾಗೇ ನೀನೂ ಸ್ವಲ್ಪ ದಾನ-ಧರ್ಮ ಮಾಡಿ ಸನ್ಯಾಸತೊಗೋ. ಅಂದಹಾಗೇ ನಿನ್ನ ಕಾರನ್ನು ದಾನ ಮಾಡುವಾಗ ನನ್ನ ನೆನಪಿರಲಿ." ಈ ಸೂರಿಗೆ ಯಾವಾಗಲೂ ಬಿಟ್ಟಿ ಸಾಮಾನುಗಳ ಮೇಲೇ ಕಣ್ಣು. ಬಿಟ್ಟಿ ಏನು ಸಿಕ್ಕಿದರೂ ಬಿಡಲ್ಲ ಅವ. ಗೋಪಾಲ ಇಷ್ಟು ಹೊತ್ತಿಗೆ ವುತಷ್ಟು ಟೈಟಾಗಿದ್ದ "ನೋಡೋ ಕ್ರೆಡಿಟ್‌ಕಾರ್ಡ್ ಕ್ಯಾನ್ಸಲ್ ಮಾಡಿಸ್ಕೊ, ಸನ್ಯಾಸಿಗೆ ಯಾವ ತರಹ ಕ್ರೆಡಿಟ್ಟೂ ಇಲ್ವಂತೆ" ಎಂದು ಹೇಳಿ ಗ್ಲಾಸ್ ಕೈಗೆತ್ತಿಕೊಂಡ.

ಅಲ್ಲೇ ಇದ್ದ ಬೇರರ್‌ಗೂ ಸ್ಫೂರ್ತಿ ಬಂದು "ಸಾರ್ ಸನ್ಯಾಸ ತೆಗೋಳೋ ದ್ಕ್ಕಂಚೇನೇ ಇನ್ನೊಂದು ಬಾಟಲ್ ಹಾಕಿ ಬಿಡಿ. ಎಗ್ ಪಕೋಡಬಿಸಿಯಾಗಿದೆ ತರ್‍ಲೀನಿ. ಒಂದ್ಪ್ಲೇಟು, ಹಿಮಾಲಯದಲ್ಲಿ ಸರಿಯಾದ ಬೀರು ಪಕೋಡ ಸಿಕ್ಕುತ್ತೋ ಇಲ್ವೋ" ಎಂದು ಕನಿಕರಿಸಿದ. ಇಡೀ ಸಂಜೆ ನನಗೆ ಸಿಕ್ಕ ಅನುಕಂಪ ಇದೊಂದೇ.

ಈಗ ಸಮ್ಮನಿರಬಾರದೆಂದು ನಿರ್ಧರಿಸಿ ಹೇಳಿದೆ. "ನೋಡ್ರಪ್ಪಾ ನಾನು ಸನ್ಯಾಸ ತೊಗೊಳ್ತೀನಿ-ಖಂಡಿತ ಆದರೆ ನೀವಂದುಕೊಂಡ ಸನ್ಯಾಸವಲ್ಲ. ನನ್ನ ಸನ್ಯಾಸ ಹೊಸ ಮಾದರೀದು. ಅದು ಈ ಕ್ಲಬ್ಬಿನಲ್ಲಿ ಬಿಲ್ಲು ಮುಟ್ಟದ ಸನ್ಯಾಸ. ಅದು ಈ ಕ್ಷಣದಿಂದ ಜಾರಿಗೆ ಬಂದಿದೆ. ಬೇರರ್, ಇನ್ನು ಮುಂದೆ ನಾನು ಸ್ವೀಕರಿಸಿದ ಬೀರ್-ಪಕೋಡ ಬಿಲ್ಲನ್ನು ಈ ನನ್ನ ಅಮೂಲ್ಯ ಸಲಹೆಗಾರರಿಗೆ ದಿನಕ್ಕೊಬ್ಬರಿಗಂತೆ charge ಮಾಡಿಬಿಡು. ಇವತ್ತಿನ ಬಿಲ್ ಅತ್ಯಮೂಲ್ಯ ಸಲಹೆನೀಡಿದ ರಾಜುವಿನಿಂದಲೇ ಪ್ರಾರಂಭವಾಗಲೀ" ಎಂದು ಎದ್ದು ಗ್ಲಾಸ್ ಎತ್ತಿ ಖಾಲಿಮಾಡಿ, ಹಿಂದು ನೋಡದೆ ಮನೆಗೆ ನಡೆದೆ. ಸಲಹೆಗಾರರೆಲ್ಲಾ ಗರ ಬಡಿದವರಂತೆ ನನ್ನ ಬೆನ್ನು ನೋಡೋದು ಹೇಗೋ ಗೊತ್ತಾಯಿತು.

ತಿರುಮಂತ್ರ

ಅ. ರಾ. ಮಿತ್ರ

"ಇಂದ್ರ ಭವನದಲಿ ಚಂದ್ರ ಮೂಡಿದನು
ಕಾದ ಹೆಂಚಿನಲ್ಲಿ
ಮೂಡಿತೆಂಬೆಯಾ ಮತ್ತೆ ಮುಳುಗಿತೋ
ಉದರ ಗಗನದಲ್ಲಿ"

ಹಾಗಿತ್ತು ಜಿ. ಎಸ್. ಶಿ. ಅವರ ಮಸಾಲೆ ದೋಸೆ ರುಚಿ
ಆದರೆ ಇಂದು ? ಹೋಟಲ್ ತಿಂಡಿ ಏನನ್ನುತ್ತೆ
ಇಂದ್ರ ಭವನದಲಿ ಚಂದ್ರ ಮೂಡಿದನು
ಕಾದ ಹೆಂಚಿನಲ್ಲಿ

ಮೂಡಿತೆಂಬೆಯಾ ಮತ್ತೆ ಮುಳುಗಿತೋ
ಉದರ ಗಗನದಲ್ಲಿ
"ಮುಳುಗಿತೆಂಬೆಯೊ ಮತ್ತೆ ಎದ್ದಿತೋ
ಉದರ ಶೂಲೆಯಲ್ಲಿ"
ಅನ್ನೋಣ ಅನ್ನುತ್ತಲ್ವಾ.

ಕುರ್ಚಿ

–ಚಂಚಲಾ ಶ್ರೀಕಂಠಯ್ಯ - ಸುರತ್ಕಲ್.

ನನ್ನ ಕಂಠೀರವ "ಕುರ್ಚಿ ಕುರ್ಚಿ" ಎಂದು ನಿದ್ದೆಯಲ್ಲೂ, ಹಲುಬಿ-ಹಂಬಲಿಸಿ ಹಾಸಿಗೆಯಲ್ಲಿ ಹೊರಳಾಡಿದ. ಅವನನ್ನು ಸಮಾಧಾನಿಸಿ ಮಲಗಿಸಿ, ನಾನು ಮಲಗಿದ್ದ ಕಾರಣ ನನ್ನ ಕನಸಿನಲ್ಲೂ ವಿವಿಧ ವಿನೋಧಾವಳಿಯಂತೆ ಅನೇಕ ರಂಗುಬಿರಂಗಿ ಕುರ್ಚಿಗಳ ದರ್ಶನವಾಯ್ತು. ಗೇಟಿನ ಕುರ್ಚಿಯಿಂದ ಹಿಡಿದು-ದಿಲ್ಲಿಯ ಸಿಂಹಾಸನದ ಕುರ್ಚಿಯವರೆಗೆ ಮತ್ತು ಟೋಪಿ ಕುರ್ಚಿಯಿಂದ ಶಾಟಿ ಕುರ್ಚಿಯವರೆಗೆ ವೈವಿಧ್ಯಪೂರ್ಣವಾಗಿ ಕಂಗೊಳಿಸಿದವು. ಈ ಕುರ್ಚಿಗಳಿಗಾಗಿ ಕುದುರೆ ರೇಸಿನಂತೆ ಶ್ರೀಸಾಮಾನ್ಯರು ಮತ್ತು ಪ್ರತಿಷ್ಠಿತರು ಇದರ ಹಿಂದೆ ಓಡುವುದನ್ನು ಕಂಡೆ. ಓಡುವ ಕುದುರೆ ಬಾಲವನ್ನಾದರೂ ಸುಲಭವಾಗಿ ಹಿಡಿದುಕೊಳ್ಳಬಹುದು, ಆದರೆ 'ಮೆರಿಗೊರೌಂಡ್' ತರಹ ಸುತ್ತುತ್ತಿರುವ ಈ ಕುರ್ಚಿಗಳನ್ನು ಹಿಡಿಯುವುದು ಎಷ್ಟು ಕಷ್ಟದ ಕೆಲಸವೆಂದು, ನನ್ನ ಕನಸಿನ ಜನರು ಪಡುವ ಕಷ್ಟದಿಂದ ಮನಗೊಂಡೆ. ಈ ನೋಟ ಸವಿಯುತ್ತಿರುವಂತೆಯೇ ನನ್ನ ಕಂಠೀರವ ಮತ್ತೊಮ್ಮೆ "ಕುರ್ಚಿ ಕುರ್ಚಿ" ಎಂದು ಒದರಿ, ಕುರ್ಚಿಯ ಸವಿಯಿಂದ ನನ್ನನ್ನು ಹೊರತಂಗ. ಎಚ್ಚೆತ್ತ ಮರ್ಕಟ ಮನಸ್ಸು ನಡೆದ, ನಡೆಯಬಹುದಾದ ಕೆಲವೊಂದು ಘಟನೆಗಳನ್ನು ಮೆಲಕು ಹಾಕಿತು.

ವಂಶಪಾರಂಪರ್ಯದಿಂದ ಬಂದ ಒಂದು ಕುರ್ಚಿ ನಮ್ಮ ಮನೆಯಲ್ಲಿದೆ. ನನ್ನ ಪತಿಯ ತಾತ ಮುತ್ತಾತಂದಿರು, ಅದಕ್ಕೂ ಹಿಂದಿನವರು, ಈಗಿನವರೂ ಅದರಲ್ಲಿ ಕೂತು-ತೂಕಡಿಸಿ ಸುಖಪಟ್ಟದಿದೆ. ಹಿರಿಯ ಪಿತೃಗಳಿಗೆ ಇದರ ಮೇಲೆ ಅಪಾರ ಪ್ರೀತಿ ಇತ್ತೆಂಬ ಪ್ರತೀತಿಯನ್ನು ಹೊತ್ತು ಮೆರೆಯುತ್ತಿದೆ ಈ ಕುರ್ಚಿ. ಇದನ್ನು ನನ್ನ ಮಗನೂ ಕಾಯ್ದುಕೊಂಡು ಬಂದಿದ್ದಾನೆ. ಮಗಳೂ ಕಾಯ್ದುಕೊಂಡ ಬರುವ ಉತ್ಸುಕತೆಯನ್ನು ತೋರಿದ್ದಾಳೆ. ತಾಪತ್ರಯ ಶುರುವಾಗಿದ್ದು ಇಲ್ಲೇ-"ಕೀರ್ತಿ"ಯ ಪತಾಕೆಯನ್ನಷ್ಟೇ ಹಾರಿಸುತ್ತಿದ್ದ ವಂಶಾವಳಿಯಲ್ಲಿ ಆರತಿ ತಟ್ಟೆ ಹಿಡಿಯಲು ಬಂದ ಮಗಳಿಂದಾಗಿ "ಕುರ್ಚಿ ಕಲಹಾನ್ನೋ" ಅಥವಾ ಕುರ್ಚಿಯ ಮೇಲಿನ ವಿಶೇಷ ಪ್ರೀತಿಯಿಂದಲೋ ತೊಂದರೆ ಪ್ರಾರಂಭವಾಗಿದ್ದು. ಗಂಡು ಮಕ್ಕಳನ್ನೇ ಹೊತ್ತು ಮೆರಸುತ್ತಿದ್ದ ಈ ಕುರ್ಚಿಯ ಮೇಲೆ ಮಗಳು. ಪೀಠ ಸ್ಥಾಪನೆ ಮಾಡಿದ್ದಳು. ರಾಜ ವಿಕ್ರಮಾದಿತ್ಯನಿಗೆ ಗುಡ್ಡದ ದಿಬ್ಬದ ಮೇಲೆ ಕುಳಿತೊಡನೆ ಅಪರಿಜ್ಞಾನ ಉಂಟಾಗಿ, ನ್ಯಾಯ ಬೇಡಲು ಬಂದ ಪುರ ಜನರಿಗೆ ನ್ಯಾಯ ಒದಗಿಸುತ್ತಿದ್ದಂತೆ, ನನ್ನ ಕಂಠೀರವ ಆ ಕುರ್ಚಿಯ ಮೇಲೆ ಕುಳಿತು ತನ್ನ ಶಿಷ್ಯವೃತ್ತಿಗೆ ನ್ಯಾಯ ಒದಗಿಸುವ ಯತ್ನ ಮಾಡುತ್ತಿದ್ದ ಇಂಥಾ ಕುರ್ಚಿಯ ಮೇಲೆ ಮತ್ತೊಬ್ಬಳು ತನ್ನ ದಾಯಿತ್ವ ಸ್ಥಾಪಿಸಲು

ಬಂದದ್ದು ಕಂಡು ಕೆಂಡಾಮುಂಡಲನಾದ. ಅವಳ ಕ್ರಾಪನ್ನು ಹಿಡಿದು ಜಗ್ಗಿ, ಸಮರ ಕಹಳೆಯನ್ನೊದಿದ್ದ. ಮಗಳು ಸಹ ಈಗಿನ ಕೆಟ್ಟ ಗಾಳಿ, ನೀರನ್ನು ಸೇವಿಸಿ ಬೆಳೆಯುತ್ತಿದ್ದಳಾದ್ದರಿಂದ ಸರಿ ಸಮಾನತೆಯ ಪ್ರಶ್ನೆಯನ್ನು ಅವನ ಮುಂದೆ ಎತ್ತಿದ್ದಳು

"ಹೋಗು...ಹೋಗೊ......ನಿನಗೊಬ್ಬನಿಗೆ ಏನು ಈ ಕುರ್ಚಿ ಮೀಸಲು ? ನನಗೂ ಇದರಲ್ಲಿ ಹಕ್ಕಿದೆ......ಪಾಲಿದೆ. ನಾನೂ ಇದರಲ್ಲಿ ಕುಳಿತುಕೊಳ್ಳಲು ಬಾಧ್ಯಸ್ಥಳು" ಎಂದು ಸಮರ ನಿಶಾನೆಯನ್ನು ತೋರಿಸಿದ್ದಳು. ಈ ಕದನದಿಂದ ಫಲಿತಾಂಶ ಮಾತ್ರ ಸ್ವಲ್ಪ ಭೀಕರ ಸ್ವರೂಪದ್ದಾಯಿತು. ಇವರಿಬ್ಬರ ಸಮಾನತೆಯ ಜಗ್ಗಾಟವನ್ನು ತಡದುಕೊಳ್ಳುವ ಶಕ್ತಿ ಇಲ್ಲದೆ ಆಂಟೀಕ್ ಕುರ್ಚಿಯ ಒಂದು ಕಾಲು, ನನ್ನ ಕಂಠೀರವನ ಕೈಗೆ ಬಂತು, ಶಾಶ್ವತ ಲಿಂಗ ವೈಕಲ್ಯವನ್ನು ಹೊಂದಿತು. ಎಂತೆಂಥ ಮಹಾಮಹಿಮರನ್ನೂ ಮತ್ತು ಮಹಾನುಭಾವರನ್ನೂ ಕಾಡದೆ ಬಿಡದ ಈ ಕುರ್ಚಿ ಪ್ರೇಮ ನನ್ನ ಮಗನನ್ನು ಸ್ವಲ್ಪ ಜಾಸ್ತಿ ಕಾಡಿದ್ದರಲ್ಲಿ ತಪ್ಪೇನೂಂತ ಸಮಾಧಾನ ಪಟ್ಟುಕೊಂಡೆ, ಇವನ ಕುರ್ಚಿ ಪ್ರೇಮ ಕಂಡ ಇತರರು "ಏನಮ್ಮ ! ನಿನ್ನ ಮಗನಿಗೆ ಕುರ್ಚಿ ಪ್ರೇಮ ಈಗಲ್ಲಿಂದಲೇ ಅಗಾಧವಾಗಿ ಬೆಳೆದು ಮೊಳೆಯುತ್ತಿದೆ. ಮುಂದೆ ದೊಡ್ಡ ರಾಜಕೀಯ ಧುರೀಣನಾಗುತ್ತಾನೆಂದು ಭವಿಷ್ಯ ನುಡಿಯುತ್ತಾರೆ. ಈ ಕುರ್ಚಿ ಪ್ರಭಾವ ಹೇಗೆ ಎಲ್ಲಿ ಬೀರುತ್ತದೆಂದು ಬಲ್ಲವರಾರು. ಆದನ್ನು ನಾನಂತೂ ಅರಿಯೆ ! ಆದರೆ ಚುನಾವಣೆಯ ಹೊತ್ತಿಗೆ ಈ ಕುರ್ಚಿಗಳ ವೇಷ ಬಟ್ಟೆ ಬಯಲು ಭೂಕಂಪವಾದಂತೆ ಗಡ ಗಡ ನಡುಗುತ್ತವೆ. ತಮ್ಮ-ತಮ್ಮ ಭದ್ರನೆಲೆಯಲ್ಲಿ ಬೇರೂರಲು ಸರ್ವ ಪ್ರಯತ್ನವನ್ನೂ ಶಕ್ತಿಮೀರಿ ನಡೆಸುತ್ತವೆ.

ಕುರ್ಚಿಗಳ ಬಗ್ಗೆ ಯೋಚಿಸುತ್ತಿದಂತೆ ಕುರ್ಚಿ ಇಲ್ಲದ ಕಾಲವೊಂದಿತ್ತೇ ಅನ್ನುವ ಅನುಮಾನ ನನ್ನನ್ನು ಅನೇಕ ಸಲಕಾಡಿದೆ. ಯಾಕಿಲ್ಲ ? ಖಂಡಿತ ಇತ್ತು. ಎಲ್ಲರೂ ಹಾಯಾಗಿ ವಸುಂಧರೆಯ ಬೆಚ್ಚನೆಯ ಅಪ್ಪುಗೆಯಲ್ಲಿ ಕುಳಿತು, ಒಂದಾಗಿ ಬದುಕಿ ಸಮಾನತೆಯನ್ನು ಸಾರಿದ್ದಿಲ್ಲವೇ ? ಅಷ್ಟೇಕೆ ಗಾಂಧಿಯವರು (ಯಾವ ಗಾಂಧಿ ಎಂಬ ಪ್ರಶ್ನೆ ಬೇಡ) ಕುರ್ಚಿಯ ಹೆಸರೆತ್ತಿದರೆ ಮುಜುಗರ ಪಟ್ಟುಕೊಳ್ಳುತ್ತಿದ್ದರು ಎಂಬುದು ಅವರನ್ನು ಬಲ್ಲವರೆಲ್ಲರಿಗೂ ತಿಳಿದ ವಿಷಯ. ಅದರ ಹೆಸರೆತ್ತದೆ ಚಾಪೆಯನ್ನಾಶ್ರಯಿಸಿ ಜಗತ್ತಿನ ಶಾಂತಿದೂತರಾಗಿ ಜನರ ಮನಗೆದಿದ್ದರು. ಹೋಗಲಿ ಬಿಡಿ......ಭೂಗತವಾದ ನೆನಪನ್ನು ಹೆಕ್ಕಿ ತೆಗೆಯುವ ಕಠಿಣ ಶ್ರಮಬೇಡ.

ಕುರ್ಚಿಯಿಂದ ಸೀಟು, ಈ ಸೀಟಿನಿಂದ ರಿಸರ್ವೇಷನ್‌ಗಳು, ಛೇರ್‌ಗಳು ಜನ್ಮ ತಾಳಿದವು ಅನ್ನುವ ನಂಬಿಕೆ ನನಗೆ ಇದೆ. ನೆಂಟರೊಬ್ಬರ ಮನೆಗೆ ಹೋಗುವ ಸಲುವಾಗಿ, ಬಸ್ಸಿನಲ್ಲಿ ಸೀಟು ಕಾಯ್ದಿರಿಸುವಂತೆ ಅದಕ್ಕೆ ಸಂಬಂಧ ಪಟ್ಟ ಅಧಿಕಾರಿಗಳಿಗೆ

ಫೋನ್ ಹಾಯಿಸಿದೆ. ನನ್ನ ಸೀಟಿನ ಭದ್ರತೆಯ ಬಗ್ಗೆ ಆಶ್ವಾಸನೆಯನ್ನು ಅವರಿಂದ ಗಿಟ್ಟಿಸಿಕೊಂಡೆ. ಬಸ್ಸು ಕೇವಲ ಕೆಲವು ತಾಸುಗಳಷ್ಟೆ ತಡವಾಗಿ ಬಸ್ ಸ್ಟಾಂಡ್‌ನ್ನು ತಲುಪುತ್ತಿದ್ದಂತೆಯೇ, ಜನ ಬಸ್ಸಿಗೆ ಮುಕುರಿದರು. ಕೆಲವರು ತಮ್ಮ ಕರ್‌ಛೀಫನ್ನು ಪುಸ್ತಕವನ್ನು, ಕೈಚೀಲವನ್ನು ಕಿಟಕಿಯ ಮೂಲಕ ಸೀಟಿನ ಮೇಲೆಸೆದು ತಮ್ಮ ಸೀಟನ್ನು ಭದ್ರಪಡಿಸಿಕೊಳ್ಳುವ ಚಾಕಚಕ್ಯತೆಯನ್ನು ತೋರಿದರೆ, ಇನ್ನು ಕೆಲವರು ಮುಂದಾಗಬಹುದಾದ ಅನಾಹುತವನ್ನು ತಪ್ಪಿಸುವ ದೂರಾಲೋಚನೆಯಿಂದ ತಮ್ಮ ಪಾದರಕ್ಷೆಯನ್ನು ಸೀಟಿನಲ್ಲಿ ಪ್ರತಿಷ್ಠಾಪಿಸಿ ತಮ್ಮ ಸೀಟನ್ನು ಭದ್ರಪಡಿಸಿಕೊಂಡರು. ಮತ್ತೊಬ್ಬ ಸಾಹಸಿ ಪ್ರಯಾಣಿಕರು ಇವರೆನ್ನೆಲ್ಲಾ ಹಿಂದೆ ದಬ್ಬಿ, ಗಾಜು ತೆರೆದ ಕಿಟಕಿಯ ಮೂಲಕ ತಮ್ಮ ಕುಬ್ಬ ದೇಹವನ್ನು ತೂರಿಸಿ, ತ್ರಿಶಂಕು ಸ್ಥಿತಿಯನ್ನು ಅನುಭವಿಸಿದರು, ಅಪರೂಪಕ್ಕೆ ಬಂದ ಬಸ್ಸು ತನ್ನ ಉದರವನ್ನು ಲೋಡ್ ಮಾಡಿ ಕೊಂಡಿದ್ದಲ್ಲದೆ, 'ಫುಟ್‌ಬೋರ್ಡ್ ಲೋಡ' ಆಗಿ, ಮಿಕ್ಕವರನ್ನು ತನ್ನ ತಲೆಯ ಮೇಲಿನ 'ಟಾಪ್'ಗೆ ರವಾನಿಸಿ 'ಟಾಪ್ ಲೋಡ್' ಬೋರ್ಡನ್ನೂ ಧರಿಸಿತು. ಇನ್ನು ನನ್ನ ರಿಸರ್ವ್ ಸೀಟಿನ ಖಾತರಿ ಕೊಂಚ-ಕೊಂಚವೇ ಕರಗ ತೊಡಗಿತು. ಆದರೂ ಭಂಡ ಧೈರ್ಯದಿಂದ ಕಂಡಕ್ಟರನ್ನು ನನ್ನ ಮೀಸಲಿನ ಸೀಟ ಬಗ್ಗೆ ಹೆದರುತ್ತಾ ಕೇಳಿದೆ. ಆತ ಸಮಾಧಾನದಿಂದ ಮತ್ತು ತೃಪ್ತಿಯಿಂದ ಬಸ್ಸಿನೆಡೆಗೆ ಕಣ್ಣುಹಾಯಿ ಸುತ್ತಾ "ಏನಮ್ಮ! ರಿಸರ್ವ್ ಸೀಟನ್ನು ಕೇಳುತ್ತೀರಾ! ಕೊಟ್ಟರೆ ನೀವು ಕುಳಿತು ಕೊಳ್ಳುವುದಾದರೂ ಎಲ್ಲಿ ಎಂದು ಯೋಚಿಸಿದ್ದೀರಾ? ಐವತ್ತು ಜನರು ಕೂರಬಹು ದಾದ ಬಸ್ಸಿನಲ್ಲಿ 80ಜನರು ಕೂತು, 30ಜನ ನಿಂತದ್ದು ಸಾಲದೆ, ಸಾಮಾನು ಇಡುವ ಟಾಪ್ ಸೀಟಿನಲ್ಲೂ ಅಷ್ಟು ಜನ ಕೂತಿರುವುದು ಕಾಣದೇ! ಸದ್ಯ ಡ್ರೈವರ್ ಸೀಟ ನ್ನೊಂದುಬಿಟ್ಟದ್ದಾರೆ. ಅದೇ ದೊಡ್ಡ ಪುಣ್ಯ. ಇವರನ್ನು ಇಳಿಸಲು ಯಾವ ಪೋಲಿಸ್ ಪೇದೆಗೂ ಸಾಧ್ಯವಿಲ್ಲ. ಇನ್ನೂ ಕೋರ್ಟಿನ ಹತ್ತಿರವೇ ಹೋಗಬೇಕು ಅಂದ ನಾನು ಸುಮ್ಮನಿರಲಾರದೆ "ಅದೇನು ಕೋರ್ಟ್" ಅಂತ ಪ್ರಶ್ನಿಸಿದೆ. ಕಂಡಕ್ಟರ್ "ಈಗ ಎಲ್ಲವನ್ನೂ ನ್ಯಾಯಾಂಗಕ್ಕೆ ತಂದರೆ ಮಾತ್ರ ನಮ್ಮ ಕೆಲಸ ಸುಲಭವಾಗುವುದಮ್ಮ! ನಿಮಗೆ ತಿಳಿಯದೆ!" ಅಯ್ಯೋ ಪೆದ್ದಿ ಅಷ್ಟೂ ನಿನಗೆ ತಿಳಿಯದೇ ಅನ್ನುವ ದೃಷ್ಟಿ ಯನ್ನು ನನ್ನೆಡೆಗೆ ಬೀರಿ, ತನ್ನ ಸಹೋದ್ಯೋಗಿಯರೊಂದಿಗೆ ಕಷ್ಟ ಸುಖದ ಮಾತು ಕತೆಗೆ ಇಳಿದ.

ಈ ಸೀಟಿನ ಚಕ್ರವ್ಯೂಹದಿಂದ ನನ್ನ ನೆಂಟರ ಮನೆಯನ್ನು ಹೇಗೆ ತಲುಪಿದೆ ನೆಂದು ಹೇಳದಿದ್ದರೆ ಮಾತ್ರ ನನ್ನ ಮರ್ಯಾದೆ ಉಳಿದೀತು. ಆ ನೆಂಟರು ನನ್ನನ್ನು ಅತಿ ಸಂಭ್ರಮದಿಂದ ಸ್ವಾಗತಿಸಿ 'ನನ್ನ ಸೀಟಿನ ಹಗರಣದ' ಆಯಾಸವನ್ನು ಪರಿಹರಿ ಸಿದರು. 'ಬನ್ನಿ ಮೇಡಂ! ನಾನು ನಿಮ್ಮನ್ನೇ ನೆನೆಯುತ್ತಿದ್ದೆ. ಸದ್ಯ ನೀವೇ ಬಂದರಲ್ಲಾ

ಎಂದು ನನ್ನನ್ನು ಸ್ವಲ್ಪ ಆಶ್ಚರ್ಯ-ಅನುಮಾನ ದೆಡೆಗೆನೂಕಿದರು. ಅಖಿಲಾ ಭಾರತ ದಂತ ಚಿಕಿತ್ಸಾ ಸಂಸ್ಥೆಯು 'ಛೇರ್‌ಪರ್ಸ್‌ನ್'ಗೆ ನನ್ನ ಬಗ್ಗೆ ಆಸಕ್ತಿ ಹುಟ್ಟಿದ್ದು ಯಾಕೆ! ಎಂದು ನನ್ನನ್ನು ನಾನೇ ಕೇಳಿ ಕೊಳ್ಳುವಷ್ಟರಲ್ಲೇ, ನನ್ನ ಸಂಶಯವನ್ನು ಪರಿಹಾರ ಮಾಡುವಂತೆ "ನೋಡಿ ಮೇಡಂ ಗ್ರಾಮೀಣ ಆರೋಗ್ಯ ಸಂರಕ್ಷಣೆಯ ಕಾರ್ಯಾರ್ಥವಾಗಿ, ಹಳ್ಳಿಗಳಿಗೆ ಒಂದು ಡೆಂಟಲ್ ಛೇರ್‌ನ್ನು ಅಂದ್ರೆ ದಂತ ಚಿಕಿತ್ಸೆಯ ಕುರ್ಚಿಯನ್ನು ನಮ್ಮ ಸಂಸ್ಥೆ ಉಚಿತವಾಗಿ ಕೊಡಲಿದೆ. ಈ ಕುರ್ಚಿಯ ಉದ್ಘಾಟನೆ ಸಮಾರಂಭದಲ್ಲಿ ಅಧ್ಯಕ್ಷಸ್ಥಾನದಲ್ಲಿರುವ ನಾನು ಕನ್ನಡದಲ್ಲಿ ಅದರ ಉಪಯೋಗದ ಬಗ್ಗೆ ಮಾತನಾಡಬೇಕಾಗಿದೆ.

ಹೀ...ಹೀ...ಹೀ...ಕನ್ನಡ ಅಂದ್ರೆ ಗೊತ್ತಿಲ್ಲಾ......ಅದಕ್ಕೆ ನೀವು ಒಂದು ಭಾಷಣ ವನ್ನು ಕನ್ನಡದಲ್ಲಿ ಬರೆದು ಕೊಡಬೇಕು ಅಂತ ಸಕಾರಣದ ವಿವರಣೆಯಿತ್ತರು. ಅಯ್ಯೋಯೋ! ದಂತ ಚಿಕಿತ್ಸೆಗೂ ಒಂದು ಕುರ್ಚಿ ಇದೆ ಎಂಬುದು ನನಗೆ ತಿಳಿದೇ ಇರಲಿಲ್ಲ. ತಿಳಿಯಲು ಹೇಗೆ ಸಾಧ್ಯ ಹೇಳಿ. ದೇವರ ದಯೆಯಿಂದ ನನ್ನ ದಂತ ಪಂಕ್ತಿಗಳು ಸೀಮೆಂಟಿನ ಕಾಂಕ್ರೀಟ್‌ನಲ್ಲಿ ಭದ್ರವಾಗಿರುವಂತೆ ನನ್ನ ವಸಡಿಗೆ ಅತು ಕುಳಿತಿವೆ, ಯಾವೊಂದು ದಿನವೂ ದಂತ ಕುರ್ಚಿಯ ಮೇಲೆ ಕುಳಿತುಕೊಳ್ಳುವ ಅಥವಾ ದರ್ಶನ ಪಡೆಯುವ ಭಾಗ್ಯ ಅವಕ್ಕೆ ದೊರೆಕಿಲ್ಲ......ಅರ್ಥಾತ್ ನಾನು ಕೊಟ್ಟಿಲ್ಲ. ಅಂತೂ ಕುರ್ಚಿಗಳ ಅದೃಷ್ಟವೇ, ಅದೃಷ್ಟ!! ಈ ಕಲಿಗಾಲದಲ್ಲಿ ಈ ಕುರ್ಚಿಗಳಿಗೆ ಸಲ್ಲುವಷ್ಟು ಪೂಜೆ, ಮರ್ಯಾದೆ ಮತ್ತಾವ ಮಹಾನ್ ಮನುಷ್ಯನಿಗೂ ಸಲ್ಲುವುದಿಲ್ಲ. ಈಗ ಕುರ್ಚಿ ಕಾಲ ಮುಂಚೂಣಿಯಲ್ಲಿದೆ. ಅನ್ನುವ ಯೋಚನಾಲಹರಿಗೆ ಬ್ರೇಕ್ ಕೊಟ್ಟೆ. ಅಥವಾ ಕುರ್ಚಿಯ ಬಗ್ಗೆ ಬರೆಯಬೇಕೊ ಅನ್ನುವ ತಾಕಲಾಟ ದೊಂದಿಗೆ ಕುರ್ಚಿಯ ಸ್ಥಾನ ಪ್ರಪಂಚದಲ್ಲಿದೆಯೊ ಅಥವಾ ಪ್ರಪಂಚದ ನೆಲೆಯು ಕುರ್ಚಿಯ ಮೇಲೆ ಕುಳಿತಿದೆಯೂ ತಿಳಿಯದೆ......ಅದರ ಜಿಜ್ಞಾಸೆಯ ಬಲೆಯಲ್ಲಿ ಸಿಕ್ಕಿಬಿದ್ದೆ.

ಗುಂಪು ಕಟ್ಟು ಮಗು

ಬೆಳೆಯೋದು ಹ್ಯಾಗೆ ಅಂತೀಯಲ್ಲ
ಎಂಥಾ ದಡ್ಡನೀ ನೀನು

ಒಂದು ಗುಂಪು ಕಟ್ಟು
ಅದರ ತಲೆ ಮೆಟ್ಟು
ಮಿದ್ದು ಮಿದ್ದು ಕುಟ್ಟು
ನೀ ಬಯಸಿದ ರೂಪಕ್ಕೆ
ಆ ಜೇಡಿ ಮಣ್ಣ ತಿರುಗಿಸು.
ನೀ ಹೇಳ್ದಂಗೆ ಕೇಳ್ತವೆ
ನಿನ್ ಕೋಲ್ನಂಗೆ ಕುಣೀತವೆ
ಜೈಕಾರ ಹಾಕ್ಕೊಂಡು ಬರ್ತವೆ
ಏಣೀ ಹಂಗೆ ನಿಲ್ತವೆ
ಮ್ಯಾಕೆದ್ದು ಒದ್ರೆ
ಉರುಳಿ ಹೋಗಲ್ಲ
ಅಲ್ಲಲ್ಲೇ 'ವಸಿ' ಮಾಡ್ಕಂಡು
ಬದುಕ್ಕಂತವೆ.

ಅರಾಮಿತ್ರ

ವ್ಯವಹಾರಿ ಸಮೀಕರಣಗಳು

ಎಸ್. ಹಾಲಪ್ಪ.

ಇಂಗ್ಲೆಂಡಿನ ತರ್ಕಶಾಸ್ತ್ರಜ್ಞ ಜಾನ್‌ವೆನ್ ಗಣಿತದ ವೆನ್‌ಚಿತ್ರಗಳನ್ನು ಆವಿಷ್ಕಾರ ಮಾಡಿದ್ದು ವಿಸ್ಮಯಕರ ಸಾಧನೆ. ಅವ್ಯಕ್ತಬೆಲೆಗಳನ್ನು ಅರಸಿ ಹೊರಟಾಗಲೇ ಸಮೀಕರಣಗಳು ಸೃಷ್ಟಿಯಾಗುತ್ತವೆ.

ಭಾರತ ಹಾರಿಸಿದ P. S. L. V. ರಾಕೆಟ್ ನಿರೀಕ್ಷಿಸಿದಂತೆ ಸಮುದ್ರಕ್ಕೆ ಬಿತ್ತು "ಬೆಲೆಏರಿಕೆ" ಎಂಬ ಲೇಬಲ್ ಹಚ್ಚಿದ್ದರೆ ಅದು ಖಂಡಿತ ಮೇಲಕ್ಕೇರುತ್ತಿತು-ಎಂಬುದು ಕೆಲವರ ಕುತರ್ಕ. ಇದಕ್ಕೂ ಹಿಂದೆ ಮಾಡಿದಂತೆ ರಾಕೆಟ್ ಉಡಾವಣೆಗೆ ಮುಂಚೆ ಪೂಜೆ ಸಲ್ಲಿಸಿದ್ದರೆ ಹೀಗಾಗುತ್ತಿರಲಿಲ್ಲವೆಂಬುದು ಕೆಲವರ ನಂಬಿಕೆ.

ರಾಕೆಟ್‌ನ ಹಂತಗಳು (ನಾಲ್ಕನೇ ಹಂತದಲ್ಲಿ ರಾಕೆಟ್ ವಿಫಲವಾದುದ್ದು) ಕಡಿಮೇ ಆದಷ್ಟೂ ಉಡಾವಣೆಯ ಸಾಮರ್ಥ್ಯ. ಹೆಚ್ಚು. ಉ. ದಾ: ಜಪಾನ್ ಎರಡು ಹಂತಗಳ ರಾಕೆಟ್ ಉಡಾಯಿಸಿದೆ. ವ್ಯವಹಾರಿಕವಾಗಿ ಹೇಳುವುದಾದರೆ, ಲೇಬಲ್ ಹಚ್ಚುವುದರಿಂದ, ಪೂಜೆ ಮಾಡುವುದರಿಂದ ರಾಕೆಟ್ ಮೇಲೇರುವುದಾದರೆ ಕ್ರಯೋಜನಿಕ್ ಎಂಜಿನ್‌ಗಳು ಬೇಕೆ ? ಸಿಗುತ್ತವೆಯೇ?

"ಸಾಫಲ್ಯ ಎಂಬುದು ಕರಾರುವಾಕ್ಕಾದ ಯೋಜನೆ ಮತ್ತು ಕಾರ್ಯಶೀಲತೆಗಳ ಗುಣಲಬ್ಧದ ನೇರ ಅನುಪಾತೀಯವಾಗಿದೆ." ಸಾಫಲ್ಯವನ್ನು V ಎಂದೂ, ಯೋಜನೆಯನ್ನು P ಎಂದೂ ಮತ್ತು Wನ್ನು ಕಾರ್ಯ ಶೀಲತೆ ಎಂದು ಸೂಚಿಸಿದರೆ ದೊರೆಯುವ ವ್ಯವಹಾರಿಕ ಸಮೀಕರಣ ;

V=K P W

K= ಸಾಫಲ್ಯದ ಸ್ಥಿರಾಂಕ =1

* * * *

ಐವತ್ತೆರಡು ಬಗೆಯ ಸಾಬೂನು ಡಿಟರ್ಜೆಂಟ್‌ಗಳನ್ನು ಜಾಹೀರಾತುಗಳ ಮೂಲಕ ತೋರಿಸಲಾಗುತ್ತಿದೆಯಂತೆ. ಅಷ್ಟೊಂದು ಬಗೆಯ ಸೋಪುಗಳ ಅವಶ್ಯಕತೆ ಇದೆಯೇ ? ಅಥವಾ ನಾವು ಅಷ್ಟು ಕೊಳಕರೆ ? ಇಲ್ಲಿ ಒಣತರ್ಕಬೇಡ. ಯಾಕೆ ...ಅಂದ್ರೆ ಒಣ ತರ್ಕ ಒಣ ಗಣೇಶ ಒಂದೇಗಣದಲ್ಲಿ ಬರುತ್ತವೆ. ಜಾನ್‌ವೆನ್ ಹೇಳಿದ್ದಾನೆ ;–

"ವ್ಯವಸ್ಥೆಯಲ್ಲಿ ಇರುವ ಸಂಬಂಧಗಳನ್ನು ಗಣಗಳ ಮುಖಾಂತರ ಹೇಳಬಹುದು." –ಎಂದು. ಸಾಬೂನು ಡಿಟರ್ಜೆಂಟ್‌ಗಳ ಸಂಖ್ಯೆಗಿಂತ ಅವುಗಳ ಗುಣಮಟ್ಟ, ಪ್ರಮಾಣ, ಹಾಗೂ ಬೆಲೆಗಳು ಬಹುಮುಖ್ಯ. ವ್ಯವಹಾರಿಕವಾಗಿ ಹೇಳುವುದಾದರೆ

ಸುಳ್ಳನ್ನೇ ಹತ್ತುಸಾರಿ ಹೇಳಿ ನಿಜವೆಂದು ನಂಬಿಸಬಹುದಂತೆ ! ಜಾಹೀರಾತು ಹೆಚ್ಚಿದಷ್ಟೂ ಇನ್ನೇನು ಏರುಪೇರಾಗಬಹುದೆಂದು ತರ್ಕಿಸುವವರ ಗಣಕ್ಕೆ ನೀವೂ ಸಹ ಸೇರಬಹುದು !

ವಸ್ತುಗಳ ಗಣಪ್ರಮಾಣಗಳ ಗಣಲಬ್ಧಕ್ಕೆ ವಿಲೋಮವಾಗಿಯೂ ಹಾಗೂ ಬೆಲೆಗಳಿಗೆ ಸಮಾನುಪಾತೀಯವಾಗಿಯೂ ಜಾಹಿರಾತು ಆಕರ್ಷಿತವಾಗಿರುತ್ತವೆ. P, Q ಮತ್ತು R ಗಳನ್ನು ಕ್ರಮವಾಗಿ ವಸ್ತುಗಳ ಗುಣ ಪ್ರಮಾಣ ಮತ್ತು ಬೆಲೆಗಳಿಗೂ ಹಾಗೂ ಜಾಹೀರಾತಿನ ಆಕರ್ಷಣೆಯನ್ನು A ನಿಂದ ಸೂಚಿಸಿದರೆ ದೊರೆಯುವ ವ್ಯವಹಾರಿಕ ಸಮೀಕರಣ ;

$$A \equiv K \times R/P\ Q$$

$K \equiv 1 \equiv$ ಸ್ಥಿರಸಂಖ್ಯೆ

* * * *

"ವಣಿಕನ ಮಾತೊಳ್ಳಿಯದು ಬಳ್ಳಕಿರಿದು" ಹೋಟಲ್ ಮೋಟಲ್-ದರ್ಶನ್ ಗಳ ವೈಭವವನ್ನು ಕೈಬಿಟ್ಟು, ದೊರೆಯುವ ದೋಸೆಯಗಾತ್ರ-ಜೊತೆಗೆ ಕೊಡುವ ಚಟ್ನಿಯ ಪ್ರಮಾಣ-ಚಟ್ನಿ ಇರುವ-ಕಾಫಿ ಕೊಡುವ ಕಪ್ಪುಗಳ ಆಕಾರ-ಅಳತೆ ಇತ್ಯಾದಿ ಗಳು ಬೆಲೆಗಳೊಂದಿಗೆ ಹೋಲಿಸಲ್ಪಡಲಿ ! ಪರಿಸ್ಥಿತಿ ಹೀಗೆಯೇ ಮುಂದುವರಿದಲ್ಲಿ ಸೂಟಕೇಸ್‌ನಲ್ಲಿ ಹಣ ತಂದು ಜೇಬಿನಲ್ಲಿ ಮಿನಿ ಮಿನಿ ವಸ್ತುಗಳನ್ನು ಕೊಂಡೊಯ್ಯುವ ಕಾಲವನ್ನು ಲೆಕ್ಕಿಸಿರಿ !

"ದಂಭೀಭವತಿ ಧೂರ್ತಾಃ ನೀರಕ್ಷಾರಂ ಶೀತಲೋಭವತಿ ! "ಧೂರ್ತನು ಸವಿ ಮಾತನಾಡುವುದು ಹೆಚ್ಚು. ನೀರಿನ ಕ್ಷಾರೀಯಗುಣ ಹೆಚ್ಚಾದಷ್ಟೂ (ಆಧುನಿಕ ವಿಜ್ಞಾನದಲ್ಲಿ ಇದನ್ನು PHಮಟ್ಟ ಎನ್ನುತ್ತಾರೆ) ಅದರ ಶೀತಲಗುಣವೂ ಹೆಚ್ಚಾಗುತ್ತದೆಯಂತೆ !" "ಜರಿದುಕೊಳ್ಳು-ಹೊಗಳಿ ಮಾರು" ಎನ್ನುವುದು ವ್ಯವಹಾರದ ಮಾತು. ಮಹಾಭಾರತದಲ್ಲಿ ಒಂದು ವಾಕ್ಯ ಹೀಗಿದೆ–"ಲಾಭವಿಲದ ವ್ಯಾಪಾರವನ್ನು ಯಾರು ಮಾಡುತ್ತಾರೆ ?" ಭೀಮ ಧರ್ಮರಾಯನಿಗೆ ಹೇಳಿದ ಮಾತಿದು.

ಫ್ರೀಗಿಫ್ಟ್–ಡಿಸ್ಕೌಂಟ್-ರಿಬೇಟ್ ಸೋಡಿ-ರಿಯಾಯಿತಿ-ಉಚಿತ ಇತ್ಯಾದಿ ಗಳಿಗೆ ಯಾವ ವ್ಯವಹಾರಿಕ ಸಮೀಕರಣ ಅನ್ವಯವಾಗುತ್ತದೆ ?" ಎಂದು ಮಂಡೆ ಬಿಸಿ ಮಾಡಿಕೊಳ್ಳಬೇಡಿ "ಕುದುರೆ ಮೇಲೆ ಸವಾರ ಕುಳಿತು ಹೆಗಲಮೇಲೆ ಕೊಡ ಇಟ್ಟು ಕೊಂಡಂತೆ !"

ಕುದುರೆ$\equiv$ಗ್ರಾಹಕನ ಮೇಲೆ ಬೀಳುವ ಭಾರ$\equiv$Wಆದರೆ $W \equiv 1+2+3 \div 4 + \cdots\cdots\infty$. $\infty =$ ಅನಂತ.

ಆಗನೂರ್ ತಂತು ದೇವಾನಾಂ..........!

ಬಿ. ನಂಜುಂಡಯ್ಯ

ನನ್ನ N.R.I. ಮೊಮ್ಮಗಳು. 5 ವರ್ಷದ ಶ್ರೇತ, ಬೇಸಿಗೆಯ ರಜಕ್ಕೆ ಅಜ್ಜಿ, ಅಜ್ಜನ ಮನೆಗೆ ಬಂದಿದ್ದಳು. ಅಜ್ಜಿ ಅಜ್ಜ ಅಂದರೆ ಅವಳಿಗೆ ಬಹಳ ಪ್ರೀತಿ. ಅವರಿಗೂ ಅಷ್ಟೆ, ಬೆಳಿಗ್ಗೆ 8ಕ್ಕೆ ಅಜ್ಜ ದೇವರ ಪೂಜೆಗೆ ಕುಳಿತಾಗ ಶ್ರೇತ ಬಂದು ಕುಳಿತಳು.

"ಗ್ರಾಂಪಾ, ಏನು ಮಾಡುತ್ತಿಯ ?"

"ಗ್ರಾಂಪಾ ಅಲ್ಲ ಪುಟ್ಟಾ, 'ಅಜ್ಜ' ಅನ್ನು, good. ದೇವರ ಪೂಜೆ ಮಾಡುತ್ತೀನಿ ಈಗ"

"ದೇವರು ಅಂದರೆ ಯಾರು ? ಈ ಫೋಟೋದಲ್ಲಿ ಇರುವವನೇ ದೇವರೆ ?" ನನ್ನ ಪೂಜಾವಿಧಾನವೇ ಬೇರೆ, Simple and short. ಅಭಿಷೇಕ, ಕುಂಕಮ. ಅರಿಶಿನ, ನೆವೇದ್ಯ ಇತ್ಯಾದಿ ಯೂವುದೂ ಇಲ್ಲ. ಭಕ್ತಿಯಿಂದ ದೇವನ ಮುಂದೆ 5 ನಿಮಿಷ ಶಾಂತವಾಗಿ ಕುಳಿತು ಧ್ಯಾನ ಮಾಡಿದರೆ ಆಯ್ತು. ಊದು ಬತ್ತಿ ಹಚ್ಚಿ ನಾಲ್ಕು ನಮಸ್ಕಾರ ಮಾಡಿದಡೆ ಮುಗಿಯಿತು. "ಗ್ರಾಂಪಾ, ಇಲ್ಲ, ಇಲ್ಲ, ಅಜ್ಜಾ, ಎಲ್ಲರೂ ನಿನ್ನ ಹಾಗೇ ಪೂಜೆ ಮಾಡ್ತಾರಾ ?", ಶ್ರೇತ ಕೇಳಿದಳು.

"ಇಲ್ಲ ಪುಟ್ಟಿ, ಕೆಲವರದು ಬಹಳ detail ಶಾಸ್ತ್ರೋಕ್ತ, ಪೂಜೆ, ತುಂಬಾ time ಹಿಡಿಯುತ್ತೆ ಅವರಿಗೆ" ಒಡನೆಯೇ ನೆನಪಾಯ್ತು ನನ್ನ ತಂದೆ 'ಅಣ್ಣಯ್ಯ'ನ ಪೂಜಾ ವಿಧಾನ !

ನಮ್ಮದು ಅಂದು ಕಂಬ ಸಾಲಿನ ದೊಡ್ಡ ಹಳ್ಳಿಯ ಮನೆ. ಅಡಿಗೆ ಮನೆಯ ಒಂದು ಮೂಲೆಗೆ ವಿಶಾಲವಾದ ದೇವರ ಪೂಜಾ ಗೃಹ. ಮಡಿ, ಮೈಲಿಗೆ ಬಹಳ ಆಚಾರವಾದ್ದರಿಂದ ಈ ಜಾಗಕ್ಕೆ ಬೇರೆಯವರಿಗೆ ಪ್ರವೇಶವಿಲ್ಲ, ನೆತ್ತಿಗೆ ಸೂರ್ಯ ಬರುವ ಹೊತ್ತಿಗೆ ತೋಟದಿಂದ ಅಣ್ಣಯ್ಯ ಹಿಂತಿರುಗಿ, ಸ್ನಾನ ಮಾಡಿ ಮಡಿ ಉಟ್ಟು ಪೂಜೆಗೆ ಕುಳಿತರೆ 2 ಗಂಟೆಗೇ ಎಲ್ಲಾ ಮುಗಿದು ಊಟ. ಅಮ್ಮನ ಅಡಿಗೆ ಅಷ್ಟು ಕಾಲವೂ ನಡೆದೇ ಇರುತ್ತಿತ್ತು. ಬೆಳಿಗ್ಗೆ ಕೆಂಡರೊಟ್ಟಿ ತಿಂದ ನಾವು 6 ಜನ ಮಕ್ಕಳು ಆಟವಾಡುತ್ತಾ, ಕಿತ್ತಾಡುತ್ತಾ ಕಾಲ ಕಳೆಯುತ್ತಾ ಊಟದ ಕೂಗಿಗೆ ಕಾಯುತ್ತಿದ್ದೆವು. ಆಗಿನ ನಮ್ಮ ಆಟಗಳೆಂದರೆ, ಗೋಲಿ, ಚಿಣ್ಣಿ–ದಾಂಡು, ಹಾಲ್ಗುಣಿ ಮಣೆಯಲ್ಲಿ ಹುಣಿಸೆ ಬೀಜದೊಂದಿಗೆ ಆಟ, ಇಲ್ಲವೆ ಚೌಕಾ ಬಾರಾ, ಹಾಗೂ ಹೆಣ್ಣು ಮಕ್ಕಳ ದ್ದು, ಕವಡೆ, ಪಗಡ ಇಲ್ಲವೆ ಕುಂಟಾಬಿಲ್ಲೆ ಆಟ. ಈಗಿನ Zee T.V. Star T.V.

ಆಗೂ ಅಥವ ರೇಡಿಯೋ ಆಗಲಿ ಇರಲಿಲ್ಲ ! ಕನ್ನಡಕ ಹಾಕ:ವ ಮಕ್ಕಳು ಬಹಳ ಕಡಿಮೆ ಇದ್ದ ಕಾಲ ! NRI ಮೊಮ್ಮಗಳಿಗೆ ಈ ಎಲ್ಲಾ ಆಟಗಳ ವಿಧಾನ ತಿಳಿಸುವ ಹೊತ್ತಿಗೆ ಅವಳ ರಜವೇ ಮುಗಿದಿರುತ್ತಿತ್ತು. ಅದು ಬೇರೆ ಕಥೆ !

ಅಣ್ಣಯ್ಯ ದೇವರ ಮನೆಗೆ ಬರುವ ಹೊತ್ತಿಗೆ ಎಲ್ಲಾ ಪೂಜಾ ಸಾಮಾನು ರೆಡಿ ಆಗಿರ ಬೇಕು. ಇಲ್ಲದಿದ್ದರೆ ಜಮದಗ್ನಿ ಗೋತ್ರದ ಅವರಿಗೆ ಮೂಗಿನ ಮೇಲೇ ಸಿಟ್ಟು ! ಅಮ್ಮ ಮಾತ್ರ ಯಾವಾಗಲೂ ಹಸನ್ಮುಖಿ, ಶಾಂತ ಮೂರ್ತಿ. ಗೌರಿ. ಊರಿಗೆಲ್ಲಾ ಕೇಳುವಂತೆ ಅಣ್ಣಯ್ಯನ ಕಂಚಿನ ಗಂಟೆ ಬಾರಿಸುತ್ತಾ ಪೂಜೆ ಪ್ರಾರಂಭ ವಾಗುತ್ತಿತ್ತು :

"ಆಗಮಾರ್ ತಂತು ದೇವಾನಾರ್ ನಿರ್ಗಮನಾರ್ ತಂತು ರಾಕ್ಷಸಾಂ" "ಲೇ ಮಕ್ಕಳಿಗೆ ಹೇಳಿ ಕೂಗ ಬೇಡಿ ಅಂತ......ಶನೀಶ್ವರಗಳು, ಪೂಜೆ ಮಾಡಲೂ ಶಾಂತಿ ನಿನ್ನ ಆ ರಾಕ್ಷಸ ಇಲ್ಲ."

"ಆಗಮಾರ್ ತಂತು ದೇವಾನಾಂ......ಕಟ್ಟಿದ ಹೂವೆಲ್ಲಿ, ಮಂತ್ರಾಕ್ಷತೆ ಸಾಲದು, ಸ್ವಲ್ಪವೂ ನಿಗಾ ಇಲ್ಲ ನಿಮಗೆಲ್ಲಾ,"

"ಅಯ್ಯೋ, ಮರೆತ್ಹೋಯ್ತು ಅಂದರೆ, ನೀವೇ ಸ್ವಲ್ಪ ನೋಡಿಕೊಳ್ಳ ಬಾರದೆ?" ಅಮ್ಮನ ಬಲು ಮೆಲ್ಲಗೆ ಒಗ್ಗರಣೆ ಹಾಕುವ ಶಬ್ದಕ್ಕೆ ಜೊತೆ ಕೂಡಿಸಿ ಹೇಳಿದ ಮಾತು!

"ಏನಂದೆ? ನಾನೇ ಎಲ್ಲಾ ಮಾಡಿ ಕೊಳ್ಳ ಬೇಕೆ, ನೀವೆಲ್ಲಾ ಇರೋದು ಏಕೆ, ಕತ್ತೆ ಕಾಯುಕ್ಕೇ ? ನಾಳೆಯಿಂದ ಎಲ್ಲಾ ಸರಿಯಾಗಿರುವಂತೆ ನೋಡಿಕೊ" ಅಣ್ಣಯ್ಯನ ಆಜ್ಞೆ.

"ಆಗಮಾರ ತಂತು ದೇವಾನಾಂ......ಲೋ ಸೀತಾ (ಸೀತಾರಾಮ) ಕತ್ತೆ ಭಡವ, ಆ ತೋಟದ ಸಿದ್ದನ ಮನೆಗೆ ಹೋಗಿ ಬಾಳೆಗೊನೆ ತಂದೆಯೇನೊ? ನೇವೆದ್ಯಕ್ಕೆ ಬೇಕು." ತಾನು ಗೆದ್ದ ಗೋಲಿಗಾಗಿ ಸತ್ಯನ ಜೊತೆ ಜುಟ್ಟು ಹಿಡಿದು ಜಗಳವಾಡು ತ್ತಿದ್ದ ಸೀತ ಓಡಿ ಬಂದು ಉಗುರು ಕಚ್ಚುತ್ತಾ ದೇವರ ಮನೆ ಬಾಗಿಲಲ್ಲಿ ನಿಂತ. "ಬೊಗಳೋ, ಏನು ಹೇಳಿದ್ದು ಕೇಳಿಸಲಿಲ್ಲವೆ ? ತಲೆ ಜೊತೆಗೆ ಕಿಗೇಗೂ ಜೇಡಿ ಮಣ್ಣೇ ! ಉಗುರು ಕಚ್ಚುವುದನ್ನು ಬಿಟ್ಟು ಸಗಣಿ ತಿನ್ನು ಬುದ್ಧಿ ಸ್ವಲ್ಪ ಚಿಗು ರುತ್ತೆ" ಅಣ್ಣಯ್ಯನ ಆಶೀರ್ವಾದ !

"ಉಹೂ, ಹೂಂ, ಅದೇ, ಹೋಗಿದ್ದೆ, ಸಿದ್ದನೇ ಹೇಳಿದ ಅವನೇ ತಂದು ಕೊಡು ತ್ತಾನಂತೆ" ಸೀತಣ್ಣನ ನಡುಗುವ ಧ್ವನಿಯ ಉತ್ತರ. "ಅವನೊಬ್ಬ ಸೋಮಾರಿ, ಕಳ್ಳ, ಅವನಿಗೆ ತಕ್ಕ ಬಂತೆ, ಊ, ಹೋಗು." "ಲೇ, ಏನೇ, ಪಂಚಾಮೃತಕ್ಕೆ ಹಾಲು, ಮೊಸರು ಎಲ್ಲಾ ಇಟ್ಟಿದ್ದೀಯೇನೆ ?" "ಹೂಂ", ಹಸಿ ಸೌದೆಲಿ ಅಡಿಗೆ ಮಾಡುತ್ತಾ ಕಣ್ಣು ಕೆಂಪಗೆ ಮಾಡಿ ಕೊಂಡು ತಲೆ ಎತ್ತದೆ ಕೊಟ್ಟ ಅಮ್ಮನ ಉತ್ತರ.

"ಇದೇನೆ, ಇದು ಹಾಲೋ ಅಥವ ಸುಣ್ಣದ ನೀರೊ? ಆಹಾ, ಈ ಮೊಸರೋ ನಿನ್ನ ಅಪ್ಪನ ಮನೆ ನೀರು ಮಜ್ಜಿಗೆ ಜ್ಞಾಪಕಕ್ಕೆ ಬರುತ್ತೆ ! ಮೋಸ, ಎಲ್ಲಾ ಕಡೆ ಮೋಸ, ಹಾಲಿಗೆ ನೀರು ಹಾಕ್ತಾರೊ ಅಥವ ನೀರಿಗೆ ಸ್ವಲ್ಪ ಹಾಲು ಬೆರೆಸು ತ್ತಾರೊ ತಿಳಿಯದು, ಎಲ್ಲಾ ಕಳ್ಳರು, ಮನೆ ಹಾಳಾಗುತ್ತೆ ಅವರಿಗೆ."

"ಹೋಗಲಿ ಬೇಗ ಬೇಗ ಮುಗಿಸಿ, ಪೂಜೇ ಕಾಲದಲ್ಲೆ ಏಕೆ ಈ ಎಲ್ಲಾ ಸಹಸ್ರನಾಮ, ಮಕ್ಕಳೆಲ್ಲಾ ಹಸಿದಿದ್ದಾರೆ. ಅಂದ ಹಾಗೆ ನನ್ನ ಅಮ್ಮನ ಮನೇಲಿ ನಿಮಗೆ ಯಾವಾಗಲೂ ಎಮ್ಮೆ ಹಾಲಿನ ಮೊಸರೇ ಹಾಕಿದ್ದಾರೆ" ಅಮ್ಮನ ಎಂದೂ ಇಲ್ಲದ ಧೈರ್ಯದ ಮಾತು !

"ಸರಿ, ಸರಿ, ಇನ್ನೇನು ನಿನ್ನ ಸುಪುತ್ರರಿಗೆ ಕೆಲಸ ಹೊಟ್ಟೆಗೆ ತಿನ್ನೋದು ಬಿಟ್ಟರೆ, ಓದು ಬರಹ ಏನೂ ಬೇಡ. ಎಲ್ಲಾ ನಾಲಾಯಕ್‌ಗಳು" ಅಣ್ಣಯ್ಯನ ವಾಗ್ಝರಿ ಅವ್ಯಾಹತ. "ನೇವೇದ್ಯಕ್ಕೆ ಇಡೇ ಬೇಗ, ಎಲ್ಲಿ ಅನ್ನ ಪಾಯಸ ಹೋಳಿಗೆ ತೊವ್ವೆ ಅಭಿಗಾರ ಎಲ್ಲಾ ಹಾಕಿದಿತಾನೆ ? ದಿನಾ ಎಲ್ಲಾ ಹೇಳ ಬೇಕು. ನಾಯಿ ಬಾಲ ಡೊಂಕು ಅಂದ ಹಾಗೆ"

"ಬಿಡಿ ಸಾಕು ಹಬ್ಬದ ದಿನ ಎಲ್ಲಾ ನಾಯಿ, ಕತ್ತೆ ಕುರಿ ಇತ್ಯಾದಿ ಧ್ಯಾನ ಏಕೆ, ಎಲ್ಲಾ ಇಟ್ಟಿದೆ ನೋಡಿ, ಬೇಗ ಮಂಗಳಾರತಿ ಮಾಡಿ" "ನೋಡೆ, ಮಂಗಳಾರತಿ ಅಂದಾಗ ಜ್ಞಾಪಕಕ್ಕೆ ಬಂತು. ಇವತ್ತು ಸಂಜೆ ಕೋಟೆ ಹನುಮಂತರಾಯನಿಗೆ ಆ ದಳ್ಳಾಳಿ ದೇವಯ್ಯನ ಸೇವೆಯಂತೆ, ಆ ಮನೆ ಹಾಳನಿಗೆ ದೇವರ ಸೇವೆ ಬೇರೆ ಕೇಡು. ಮಾಡುದು ಅನಾಚಾರ ಮನೆ ಮುಂದೆ ಬೃಂದಾವನ ಅಂದ ಹಾಗೆ ! ಎಲ್ಲಾ ಏಕೆ ನಮಗೆ, ಅವರವರ ಕರ್ಮ ಅವರನ್ನು ತಿನ್ನುತ್ತೆ. ಹೂ. ಮಂಗಳಾರತಿ ತಗೊಳ್ಳರೊ ಮಂಗಗಳಿರಾ" ಅಣ್ಣಯ್ಯದ ಕೂಗಾಟ. ಹೀಗೆ ಅಣ್ಣಯ್ಯನ ದೇವರ ಪೂಜೆ ಮುಗಿಯ ಬೇಕಾದರೆ ಮಧ್ಯಾಹ್ನ 2 ಗಂಟೆ ಆಗುತ್ತಿತ್ತು. ನಂತರ ಅಮ್ಮನ ಕೈಯಿನ ಊಟ ! ಅಣ್ಣಯ್ಯನಿಗೆ ಮಕ್ಕಳನ್ನು ಕಂಡರೆ ಪ್ರೀತಿ ವಿಶ್ವಾಸ ಇರಲಿಲ್ಲ ಅಂತ ಅಲ್ಲ. ಅವರ discipline theory ನೇ ಬೇರೆ. 'ಮುದ್ದು ಮಾಡಿದರೆ ಮಕ್ಕಳು ಕೆಟ್ಟು

ಹೋಗುತ್ತಾರೆ. strict discipline ಮಾಡಿದ್ರೆ ಉದ್ಧಾರವಾಗುತ್ತಾರೆ' ಅಂತ ಇರಬೇಕು. ಏನೇ ಆಗಲಿ ಅಣ್ಣಯ್ಯನಿಗಂತೂ ಪ್ರಪಂಚದ ಎಲ್ಲಾ ವ್ಯವಹಾರ, ಮಾತುಕತೆ ಎಲ್ಲಾ ದೇವರ ಸನ್ನಿಧಿಯಲ್ಲೇ ಆಗ ಬೇಕು ! ಬಹುಶಃ ಅಣ್ಣ ಅಮ್ಮನ ತುಂಬು ಸಂಸಾರದಲ್ಲಿನ ಜೀವನದ ಪರಸ್ಪರ ಪ್ರೀತಿ, ವಿಶ್ವಾಸ ತೋರಿಸುವ ವಿಚಿತ್ರ ಕಾಲಾವಕಾಶ ದೇವರ ಪೂಜಾಕಾಲವೇನೇ ಅನ್ನಿಸುತ್ತೆ ! ಅದೊಂದು, ಸರಳ ಸುಂದರ ಸಂಸಾರದ ನಿತ್ಯ ಪೂಜೆ ಆಗಿರುತ್ತಿತ್ತು. ಅಣ್ಣಯ್ಯ ತೀರಿಕೊಂಡು ದಶಕಗಳೇ ಕಳೆದಿವೆ ಅಮ್ಮನೂ ಇಂದಿಲ್ಲ. ಆದರೆ ಅವರ ಪೂಜಾ ವಿಧಾನ, ಭಕ್ತಿ, ಮಡಿ, ಶ್ರದ್ಧೆಗಳ ನೆನಪು ಮಾತ್ರಾ ಎಂದೂ ಮರೆಯುವಂತಿಲ್ಲ.

ಕೇಳಿರೋ

ಅ. ರಾ. ಮಿತ್ರ

ನನ್ನ ಮಾತೆಂದರೆ...ಕೇಳಿರೋ
ಮನೆಯಲ್ಲಿ ಶಿಲಾಶಾಸನ

ಅಂದರೆ, ಯಾರಾದರೂ
ಓದುವ ಗೋಜಿಗೆ ಹೋದರೆ ತಾನೆ !

ನನ್ನ ಭಾಷಣವೆಂದರೆ ಕೇಳಿರೋ
ಜನರೆಲ್ಲ ಉತ್ಸಾಹದಿಂದ ಕಿರುಚುತ್ತಾರೆ
"ಕಲ್ಲು ಸಿಕ್ಕರೆ ಕೊಳ್ಳಿರೋ" !

ನನ್ನ ಬರಹ ಮಾತ್ರ ಕೇಳಿರೋ
ಶಾಶ್ವತ ಸಾಹಿತ್ಯ

ಅಂದರೆ,
ಕೊಳ್ಳುವವರಿಲ್ಲದೆ
ಶಾಶ್ವತವಾಗಿ
ಮನೆಯಲ್ಲೇ ಉಳಿಯುವ ನಿತ್ಯ ಸತ್ಯ.

"ಸೆನ್ಸೇಶನ್"

ಕಮಲಾರಾಮಸ್ವಾಮಿ

"ತಟ್ಟೆ ಹಾಕಿದೆ, ಊಟಕ್ಕೆ ಬನ್ನಿ" ಸಾರಿಗೆ ಒಗ್ಗರಣೆ ಹಾಕುತ್ತಾ ಅಡಿಗೆ ಮನೆ ಯಿಂದಲೇ ಕೂಗಿದೆ.

ನಿಶ್ಯಬ್ದ

ಮತ್ತೊಮ್ಮೆ ಕೂಗಿ ಟೇಬಲ್ ಅಣಿಮಾಡಿದೆ.

ಸದ್ದಿಲ್ಲ, ಸುಳಿವಿಲ್ಲ, ಮನೆಯಲ್ಲಿ ಅಪ್ಪ, ಮಗ, ಮಗಳು ಎಲ್ರೂ ಇದ್ರು ಭಾನುವಾರ, ರಜಾ. ಕ್ರಿಕೆಟ್ ಮ್ಯಾಚ್ ಆಗ್ತಾ ಇತ್ತು. ಇದ್ದಕ್ಕಿದ ಹಾಗೆ ಇಷ್ಟೊಂದು ನೀರವತೆ ? ಆತಂಕವಾಯ್ತು. ಬಹುಶಃ ಕರೆಂಟು ಹೋಗಿರಬೇಕು ಅದಕ್ಕೇ ಮ್ಯಾಚ್‌ನ ಗದ್ದಲವಿಲ್ಲ ಎಂದುಕೊಂಡು ಡ್ರಾಯಿಂಗ್ ರೂಮಿನಲ್ಲಿ ಇಣುಕಿದೆ, ಟಿ. ವಿ ಯಲ್ಲಿ ಕ್ರಿಕೆಟ್ ಮ್ಯಾಚ್ ನಡೆದಿತ್ತು. ಆದ್ರೆ ನಿಶ್ಯಬ್ದವಾಗಿ, ವಾಲ್ಯೂಂ ಕೊಟ್ಟಿರಲಿಲ್ಲ, ತಂದೆ, ಮಗಳು ಪೇಪರ್‌ನಲ್ಲಿ ಮುಖ ಹುದುಗಿಸಿಕೊಂಡಿದ್ದರು. ಮಗ 'ಫೆಮಿನಾ' ಓದೊದ್ರಲ್ಲಿ ಮಗ್ನನಾಗಿದ್ದ. "ಎಲ್ರೂ ಎದ್ದು ಬರ್ತಿರಾ ಊಟಕ್ಕೆ ಅಡಿಗೆ ಆರಿ ಹೋಗುತ್ತೆ" ಗುಡುಗಿದೆ. "ಆಂ......"ಯಜಮಾನರು ಬೆಚ್ಚಿ, ದಡಬಡಿ ಸುತ್ತ ಎದ್ದರು. ಮಕ್ಕಳು ಕಿವುಡರಂತೆ ಕೂತೇ ಇದ್ರು.

"ನಡೀರಿ ಬಡಸ್ತೇನೆ. ಯಾರಿಗೆ ಯಾವಾಗ ಬೇಕೊ, ಆಗ್ಲೆ ಊಟ ಮಾಡ್ಲಿ" ದಡದಡ ಬಂದು ಕುಳಿತ ನಮ್ಮವರಿಗೆ ಬಡಿಸಲು ಶುರು ಮಾಡ್ದೆ, "ಅದೇನಿತ್ತು ಪೇಪರ್‌ನಲ್ಲಿ, ಅಷ್ಟೊಂದು ಓದ್ತಾ ಇದ್ರಿ ಮ್ಯಾಚ್‌ನೂ ನೋಡ್ದೆ ?

"ಏನಿಲ್ಲ"

"ಏನಿಲ್ದೆ ಅಷ್ಟೊತ್ತು ಹ್ಯಾಗೆ ಪೇಪರ್ ಹಿಡಿದುಕೊಂಡಿದ್ರಿ ?"
ಮಾತಿಲ್ಲ, ಅವ್ರು ಯಾವಾಗ್ಲೂ ಹಾಗೇನೇ ! ಮಾತು ಬಹಳ ಕಮ್ಮಿ. ಮಗ-ಬಂದ. "ಮಾಗೀತಾ ಓದಿದ್ದು ! ಹೆಣ್ಣು ಮಕ್ಕಳಿಗೆ ಅಂತ ಇರೋದು · ಫೆಮಿನ ಓದೋರು

ಬರೀ ಗಂಡಸ್ರೇ"

"ಅಷ್ಟಲ್ದೇ ಹೆಂಗಸರ ವಿಚಾರ ಹೆಂಗಸರ್ಗೇ ಯಾಕೆ ಬೇಕು ? ತಿಳಿಕೊಳ್ಳ ಬೇಕಾದ್ದು ನಾವೇ" ವಾದಿಸುತ್ತಾ ಕುಳಿತ.

ಮಗ್ಳೂ ಬಂದ್ಳು "ಏನಿತ್ತೆ timis ನಲ್ಲಿ ? ಅಷ್ಟೊಂದು ಏಕಾಗ್ರತೆ ?" ಇರ ಲಾರದೆ ಕೇಳ್ದೆ ;

"ನೀನೂ ಓದು, ನಿಂಗೆ ಓದು ಬರೋಲ್ವೆ ?"

"ನಾವೇ ಓದಿದ್ರೆ ಆಗ ಮಜಾ ! ಕೇಳಿ ತಿಳುಕೊಳ್ಳೋಕೆ ಇದೇನು ಶ್ರುತಿಗಳು ಕಾಲ ಕೆಟ್ಹೋಯ್ತೇ ?"

"ಥೂ, ಏನು ಹುಡಗ್ರಪ್ಪಾ, ಪೇಪರ್‌ನಲ್ಲಿ ಏನಿದೆ ಅಂದ್ರೆ, ತಲೆಗೊಂದು ಮಾತು..........

"ನೀನು ಸುಮ್ನೆ ಊಟ ಮಾಡ್ಬಾರ್ದೇ. ಪೇಪರ್ ತುಂಬಾ ಬರೀ ಸೆನ್‌ಸೇಷನ್ನೇ"

"ಸೆನ್ ಸೇಷನ್......ನಾನು ನೋಡ್ಲೆ ಇಲ್ವೆ : ಬೆಳಿಗ್ಗೆ ಗದ್ಲದಲ್ಲಿ ಓದ್ಲಿಲ್ಲ" ಬಡಸ್ತಾ ಇದ್ದ ಸೌಟನ್ನು ಅಲ್ಲೇ ಇಟ್ಟು ಪೇಪರ್ ನೋಡಲು ಓಡಿದೆ.

ಪೇಪರ್ ಹರವಿಕೊಂಡು ಪೇಜು ತಿರುವಿದೆ. ಎರಡನೇಯ ಪುಟದಲ್ಲೇ ಇರೋದು ಇಂತಹ ವಿಚಾರಗಳೆಲ್ಲಾ. ಒಂದು ಕಾಲಂನೂ ಬಿಡದೆ ನೋಡಿದೆ. ಎಲ್ಲೂ ಯಾವ ತರಹ ಭಯಂಕರ ಕೊಲೆಯಾಗಲಿ, ಸುಲಿಗೆ ಮೋಸ. ದರೋಡೆ, ಊಹುಂ ಏನೂ ಕಾಣಿಸಲಿಲ್ಲ, ಯಾವ ನಟ, ನಟಿ ಪರವಾನ ತೆರಿಗೆಕೊಡ್ದೆ ಇರೋದಾಗ್ಲಿ, ಅಪಘಾತಗಳಾಗಲಿ, ಎಂತಹ ವಿಚಾರನೂ ಇಲ್ಲ. ಮಧ್ಯದ ಪೇಜು ನೀರಸ. ಬರೀ ಎಲೆಕ್ಷನ್ ವಿಚಾರವೆ, ತಿರುಗಿಸಿ ಮೊದಲನೇ ಪುಟ ನೋಡ್ದೆ, ಶೇಷಣ್ಣನ ಆರ್ಭಟದ ಮಾತುಗಳು ತಮಿಳುನಾಡಿನವರ ಆಕ್ರೋಶ ಬಿಟ್ರೆ ಮತ್ತೇನೂ ಕಾಣಿಸಲಿಲ್ಲ, ನಗು ಬಂತು. ನಿಜವಾಗಿ ಗಂಡಸ್ರು ಅಂದ್ರೆ ಇಬ್ರೆ, ಒಬ್ಬ ವೀರಪ್ಪನ್, ಇನ್ನೊಬ್ಬ ಶೇಷನ್, ನ್ಯೂಸ್ ಮಾಡ್ತೋರು ಇವರಿಬ್ಬರೇ ?

ತಿರುಗೀ ಎರಡನೇ ಪೇಜಿನ ಮೇಲೆ ಕಣ್ಣಾಡಿಸಿದೆ. ಅರ್ಧ ಮುಕ್ಕಾಲು ಪೇಜು ಬರೀ ವಿಶ್ವಸುಂದರಿಯ ರಥಯಾತ್ರೆ ಚಿತ್ರಗಳು, ಅವಳು ಊರಿಗೆ ಬಂದದ್ದು, ಹೋದದ್ದು, ಮಾತಾಡಿದ್ದು, ನಿಂತಿದ್ದು, ಕೂತಿದ್ದು ಎಲ್ಲಾ ವರದಿಯಾಗಿತ್ತು. ನಮ್ಮೋರು ಬಹಳ ಅತಿ ಮಾಡ್ತಾರೆ. ಏನಾದ್ರೂ ಗೆದ್ರೆ ಆರು ತಿಂಗಳು ಅದೇ ವಿಚಾರ–ಯಾವ ದಿನಪತ್ರಿಕೆ, ವಾರಪತ್ರಿಕೆ, ಮಾಸಪತ್ರಿಕೆ. ಎಲ್ಲಾದ್ರಲ್ಲೂ ಅದೇ ಸುದ್ದಿ ಸುಷ್ಮಿತಾಸೆನ್ ವಿಶ್ವಸುಂದರಿಯಾಗಿ ಆಯ್ಕೆ ಆಗಿದ್ದು ಹೆಮ್ಮೆಯ ವಿಚಾರವೇ. ಆದ್ರೇ ಅದನ್ನೇ ಪದೇ ಪದೇ ಹೇಳಿದ್ರೆ "ಹಾಡಿದ್ದನ್ನೇ ಹಾಡೊ ಕಿಸುಬಾಯಿ ದಾಸ" ಅಂದ್ಹಾಗೆ ಅವಳು ಗೆದ್ದು 4-5 ತಿಂಗಳಲ್ಲೇ ನಂ ಮುಗ್ಳೂರಿನ ಹುಡುಗಿ ಐಶ್ವರ್ಯ "ಪ್ರಪಂಚ ರೂಪಸಿ" ಎನ್ನಿಸಿಕೊಂಡು ಬಿಟ್ಳು !

"ನಾನು ಬರ್ತೀನಿ ಬಾಗಿಲು ಹಾಕ್ಕೋ" ನಮ್ಮವರಾಗಲೇ ಹೊರಟರು. ಮಧ್ಯಾನ್ಹ Sports club ನ ವಾರ್ಷಿಕ ಕ್ರೀಡಾ ಸ್ಪರ್ಧೆಗಳಿಗೆ ಜಜ್ಜ್ ಆಗಿದ್ದರು. ಆಟಗಳು 2 ಘಂಟೆಗೆ ಪ್ರಾರಂಭ ಎಂದಿದ್ದರು.

"ಹೂಂ ಬಾಗಿಲು ಹಾಕ್ಕೋತ್ತೀನಿ ಎದ್ದು ಬಂದೆ." ಸಿಕ್ಲೀ ಇಲ್ಲಾರಿ ಸೆನ್ ಸೇಷನ್ ಸಮಾಚಾರ" ಅಂದೆ.

ನಗುತ್ತಾ ಇವ್ರುದರು "ಅಯ್ಯೋ ಹುಚ್ಚಿ–ಸೆನ್ ಮತ್ತು ಶೇಷನ್ ಅವರ ವಿಚಾರ ಸೇರಿಸಿ ಸೆನ್-ಸೇಷನ್ ಅಂದೆ ಹೋಗು, ಊಟ ಮಾಡು,"

ಮಕ್ಕಳಿಬ್ಬರೂ ಗಹಗಹಿಸಿ ನಕ್ಕರು.
"ಒಳ್ಳೇ ಸೆನ್‌ಸೇಷನ್ combination ನ್ನು ಅಮ್ಮಂಗೆ ತಲೆ ತಿಂದ ವಿಚಾರ" ಮಗ ನಕ್ಕ.

"ನಿಜಕಣಣ್ಣಾ ಬರ್ನಾಡ್ ಷಾ ಹೇಳ್ದ ಹಾಗೆ her beauty and his brains ಆಗಿದ್ರೆ ಎಷ್ಟೊ ಚೆನ್ನಾಗಿರ್ತಿತ್ತಲ್ವಾ"

"ಅದಕ್ಕೇನೂ ಕಷ್ಟಪಡಬೇಕಾಗಿಲ್ಲ. ಈಗ ready made babies ಬಗ್ಗೆ ಕೇಳಿದ್ಯೊ ಇಲ್ವೊ? ಸಲ್ಲು, ಕ್ಲೋನ್ ಇವುಗಳ ಬಗ್ಗೆ ಆಗ್ತಾ ಇರೋ ಪ್ರಗತಿ ಯಲ್ಲಿ ಡಿ. ಟಿ. ಪಿ. ಯಿಂದ ತೆಗೆದ ಪ್ರತಿಗಳ ಹಾಗೆ, ಎಷ್ಟು ಬೇಕಾದ್ರೂ ಪ್ರಿಂಟ್ಸ್, ತೆಗೀಬಹುದು, ಅದೆನಾದ್ರೂ ಚಾಲ್ತಿಗೆ ಬಂದ್ರೆ we will have a wonder ful popultaion bold, brainy and beautiful'' ಮಗ ಕೈ ತೊಳೆದು ಕೊಳ್ಳಲು ಹೋದ.

"ಹೌದು ಆದ್ರೆ, ತುಂಬಾ ಹುಷಾರಾಗಿರಬೇಕು my beauty and your brains ಆಗಿಬಿಡಬಾರ್ದು, ನೋಡಿದ್ಯೊ ಇಲ್ವೊ ಪ್ಲೇಗ್ ಪ್ಯೆರಸ್‌ಗಳ ಗಲಾಟೆ ಹಾಗೆಯೇ ಸ್ವಲ್ಪ ಅದ್ದು ಬದ್ದು ಆದ್ರೂ ಆಗ Sensational news ಆಗುತ್ತೇ"

ಮೀನುಗಾರ

ಹೇಳಿದ್ದು :ಉಳ್ಳೂರ ಮೂಕಾಂಬಿಕೆಯಮ್ಮ

ಸಂಗ್ರಹ–ಅರುಣಾ ಆರ್. ಕಾರಂತ

ನಾನೊಬ್ಬ ಮೀನಿನ್ವ್ಯಾಪಾರಿ । ಮಾಡ್ತೆ
ಏನ್ ಬ್ಯಾಸ್ರಿಲ್ದೆ ಕಡ್ಲ ಸವಾರಿ ॥ಪ॥

ದಡ್ಡ ದಡ್ಡ ಮೀನ್ ಹಿಡ್ಕ ಬತ್ತೆ
ನಾನ್ ಹೆಡ್ನಲ್ಲ ಜನು ಕಂಡ ಪುಗ್ಸಾಟೆಕೊಡ್ತೆ
ದುಡ್ಡಿನ ಮುಖ ಕಾಂಬೋನಲ್ಲ । ಅವರ್ಕೂಡ್
ಬಡ್ಡಿಲ್ದೆ ಸಾಲು ಕಡ ತತ್ತೆ ಸುಳ್ಳಲ್ಲ ॥ನಾನೊಬ್ಬ॥

ಎಲ್ಲೆಲ್ಯರ್ ಪಂಚಾಯ್ತಿಗ್ ಕರಿತ್ರ । ಸೊಮ್ಮೆ
ಬಲ್ಲಾದನೆಂದ ಕಾಯ್ದೆ ಕಾನೂನ್ ಕೇಂತ್ರ
ಇಲ್ಲ್ ಬಾರೆಂದೂಟ್ಕ ಕರ್ದ್ವಾಕ್ತ್ರ । ನಾನ್
ಎಲ್ಲೋರು ಅಪ್ಪಂತರ ಸರ್ಗದ್ಗಿ ಕೊಡ್ತ್ರ ॥ನಾನೊಬ್ಬ॥

ಆರ್ ಮಕ್ಳಿಗ್ ಅಬ್ಬೆ ನನ್ನ ಹೆಂಡ್ತಿ
ವಾಂತೀ ಜೋರಾಯ್ತು ಕೈಬಿಟ್ಟಿಕ್ ಹೋದ್ಲ್ ಪ್ರಣ್ವ್ಯಾಸ್ತಿ
ನಾರ್ಕಳಿ ಸುಬ್ಬಯು ವಾರ್ತಿ
ಹೇಳ್ರ್ । ಉರ್ ಕುಡ್ಕಿ ಮಾಡ್ಕಂಡ್
ತಂದೆ ಬಾಯ್ಗ್ಯಾರ್ತಿ ॥ನಾನೊಬ್ಬ॥

ಕಡ್ಲಿಗೆ ಹೋರ್ ಗಾಳಿಯು ಕಾಟೊ । ಬೆಟ್ಗೆ
ಗುಡ್ಸಲ್ಲಿ ಕೂಕಂಡ್ರೆ ನೆಂಟರ ಕೂಟೊ
ಆಡ್ಯಳ ನನ್ಹೆಂಡ್ತಿ ಜಗಳಾಟೊ
ಈ ತೊಡಕೀನೊಳನುದಿನ ಬಿದ್ದೆ ಪೇಚಾಟೊ ॥ನಾನೊಬ್ಬ॥

ಹೊತ್ತಾರ್ಮ್ಮನ್ನೆದ್ದ್ಮುಖ ತೊಳ್ದೆ । ಜೊಳ್ಳಿಗ್
ಸುತ್ಬಂದ್ ತಿಮ್ಮಪ್ಗೆ ನಾಮೂನ ಹಾಕ್ದೆ

ಮುತ್ತೈನ ಗಂಡ ಜಂಗೈದೆ ।
ಡೋಣಿ ಒತ್ಕಂಡ್ ಬಲಿಬೀಸುತ್
ಬರ್ನಂದ್ ಬೈಯ್ದ್ದ ॥ನಾನೊಬ್ಬ॥

ಅಬ್ಬಸರ್ಕ ಬಂದಳ ಸುಬ್ಬಿ । ಇದ್ದ
ಒಬ್ಬ ಮಗ್ನ ಗೆಯ್ಯ್ಯಕೆ ಬಿಡೆನೆಂದ್ಲು ಗಬ್ಬಿ
ಜಬ್ಬ ಹೋಯ್ ಹೋಗೆಂದ್ಲು ಕೊಬ್ಬಿ
ಅಬ್ಬಿ ಮಗ ಒಟ್ಟ್ಯಾಯ್ಕಂಡ್ ವಳ್ದಾಕ್ರ ಬೊಬ್ಬಿ
॥ನಾನೊಬ್ಬ॥

ನನ್ಮಕ್ಳ ಕಳ್ಳ್ ಸಾರಾಯು ದಾಸ್ರ
ಅಳ್ಯ ಚಿನ್ಮರ್ಗ್ಗಿಗ್ ಮುಂಚಿಂದ ನನ್ನಮಾಲ್ಯ ಬ್ಯಾಸ್ರ
ಇನ್ನ ಮನಿಯಾಗ್ ಕೂಳ್ಗಂಜಿ ತೋಸ್ರ
ಕಳ್ವೆ ಕಣಿಮುಚ್ಚು ಗಂಟ ।
ಜೀತ್ರ ಬತ್ತ್ ಕೆಟ್ಟೈಸ್ರ್ ॥ನಾನೊಬ್ಬ॥

ಗಟ್ಟಿಗ ಅಂದೇಳ್ತ್ರ ಎಲ್ಲ । ನನ್ನ
ಗುಟ್ಟ್ಯಾ ಯಾರ್ನೂಡ ಹೇಳು ಮಗನಲ್ಲ
ಕಟ್ಟಿಟ್ಟದ ಗೆಂಟ ಅಂತ್ರೆಲ್ಲ । ನಾನ್
ಎಷ್ಟಿದ್ದನೆಂಬುದ ಸಿರಿಕೃಷ್ಣ ಬಲ್ಲ. ॥ನಾನೊಬ್ಬ॥

ಹಾದಿಯಲ್ಲಿ ಕೇಳಿಸಿದ್ದು :

"ನಮ್ಮಂಥ ಇಂಟಿಲೆಕ್ಚುಯಲ್ಸು, ಅಂದ್ರೆ ಬುದ್ಧಿ ಜೀವಿಗಳು ಪ್ರತಿ ಭಾನುವಾರ ಬೀರ್ ಕುಡೀತಾ, ನಮ್ಮ ದೇಶದ ಭಷ್ಟಾಚಾರ, ಜಾತೀಯತೆ, ಇವುಗಳ್ನ ಚರ್ಚಿಸ್ದೇ ಹೋದ್ರೆ, ನಿಜವಾಗ್ಲೂ ನಂದೇಶದ ಗತಿ ಏನಾಗ್ತಿತ್ತೊ ಅಂತೀನಿ"

ಅಂಗಡಿ ಮುಚ್ಚುವುದು

ಶಂಸ

ಪ್ರತಿಯೊಂದು ಶಬ್ದಕ್ಕೂ ಪ್ರತಿಯೊಬ್ಬರಿಗೂ ಅರ್ಥವಾಗುವ ಕೆಲವು ಅರ್ಥಗಳು ಇರುವಂತೆಯೇ, ವಿದ್ವಾಂಸರಿಗೆ ಮಾತ್ರ ತಿಳಿಯುವ ನಾನಾರ್ಥಗಳು ಹಾಗೂ ಅದನ್ನು ಆಗಾಗ ಬಳಸುವ ಕೆಲವು ಜನರಿಗಷ್ಟೇ ಗೊತ್ತಿರುವಂತ ಸಂಕೇತಾರ್ಥಗಳೂ ಇರುತ್ತವೆ.

ಉದಾಹರಣೆಗೆ, ಅಂಗಡಿ ಮುಚ್ಚುವುದನ್ನೇ ತೆಗೆದುಕೊಳ್ಳಿ. ನಾನು ನೌಕರಿ ಮಾಡುತ್ತಿರುವಂತೆ ನಟಿಸುವುದು ಸಮೂಹ ಸಂಸ್ಕೃತಿ ನಿರ್ದೇಶನಾಲಯದಲ್ಲಿ. ನಮ್ಮದು ಕನ್ನಡ ನಾಡು ನುಡಿ ಸಂಸ್ಕೃತಿ ಕಲೆ ಸಾಹಿತ್ಯಗಳನ್ನು ಕುರಿತು ಎಲ್ಲ ಸಂಶೊಧನೆಗಳು ಒಂದೇ ಸೂರಿನ ಅಡಿ ನಡೆಯುವ ಮಹಾ ಕಛೇರಿ. ಸುಮಾರು ಐವತ್ತು ಜನ ಸಂಶೋಧಕರು ನನ್ನ ಜೊತೆ 'ಕೆಲಸ ಮಾಡುತ್ತಿದ್ದಾರೆ. ನಿರ್ದೇಶಕರ ವಿಶಾಲ ಕೊಠಡಿಯನ್ನು ಬಿಟ್ಟರೆ ಸಂಶೊಧಕರಿಗೆ ಸಿಕ್ಕಿರುವುದೆಲ್ಲ ಕಿಷ್ಕಿಂದೆಯಂಥ ರೂಮ್‌ಗಳೇ ಯಾವ ಮಹಾವಾಸ್ತು ಶಿಲ್ಪಿ ಈ ಸಮೂಹ ಸಂಸಿ ಕಛೇರಿ ಕಟ್ಟಡದ ಪ್ಲ್ಯಾನ್ ಬರೆದು ಕೊಟ್ಟನೋ ತಿಳಿಯದು, ಮುಖ್ಯ ಪ್ರವೇಶದ್ವಾರದ ಎರಡೂಕಡೆ ಉದ್ದವಾದ ಕುದುರೆ ಲಾಯದಂಥ ಕಟ್ಟಡಗಳು. ಎರಡೂ ಕಟ್ಟಡಗಳಲ್ಲಿ ಎರಡೆರಡು ಸಾಲು ಕೊಠಡಿಗಳು ನಡುವೆ ಕಿರಿದಗಲವಾದ ಪ್ಯಾಸೆಜ್ ಈ ಎಲ್ಲ ಕೊಠಡಿಗಳೊಳಗೆ ತೂರಿಕೊಳ್ಳುವ ಮೊದಲು ಕಟ್ಟಡದ ಪ್ರವೇಶದ್ವಾರದ ಒಳಹೋಗಬೇಕು. ಈ ಬಾಗಿಲನ್ನು ಮುಚ್ಚಿ ದರೆಂದರೆ ಸಂಶೋಧಕರಾರೂ ಒಳಗೆ ಬರುವಂತಿಲ್ಲ, ಹೊರಗೆ ಹೊಗುವಂತಿಲ್ಲ. ಎಂದೇ ಈ ಕಟ್ಟಡಗಳಿಗೆ ಎಡ ಸೆರೆಮನೆ ಮತ್ತು ಬಲಸೆರೆಮನೆ ಎಂಬ ಅಡ್ಡಹೆಸರು ಗಳು, ಈ ಮುಖ್ಯ ಬಾಗಿಲುಗಳನ್ನು ಕಾಯಲು ಗೂರ್ಖನೊಬ್ಬನನ್ನು ನೇಮಿಸುವ ಜಾಣ ದುರ್ಬುದ್ಧಿ ಪುಣ್ಯವಶಾತ್ ಸಮೂಹ ಸಂಸಿ ನಿರ್ದೇಶಕರಿಗೆ ಇನ್ನೂ ಬಂದಿಲ್ಲ.

ಏನು ಹೇಳುತ್ತಾ ಇದ್ದೆ ? ಶಬ್ದಾರ್ಥ ವಿಹಾರವನ್ನು ಕುರಿತು ಅಲ್ಲವೇ ? ನಮ್ಮ ಸಮೂಹ ಸಂಸಿಯ ಸಂಶೋಧಕರೆಲ್ಲ ಪರಸ್ಪರ ಒಂದು ಒಮ್ಮತಕ್ಕೆ ಬಂದಿದ್ದಾರೆ. ಪ್ರತಿಯೊಬ್ಬರ ಕೊಠಡಿ ಅಥವಾ 'ಸೆಲ್'ನ ಬೀಗದ ಕೈಯ ಒಂದು ಕೀಲಿ ಆಯಾ ಸಂಶೋಧಕನ ವಶದಲ್ಲಿದ್ದರೆ, ಇನ್ನೊಂದು ಕೀಲಿ ಪಕ್ಕದ ಕೊಠಡಿಯ ಸಂಶೋಧಕನ ಸ್ವಾಮ್ಯದಲ್ಲಿರುತ್ತದೆ. ಇದರಿಂದಾಗಿ ಪ್ರತಿಯೊಬ್ಬ ಸಂಶೋಧಕನಿಗೂ

ತನ್ನ ಕೊಠಡಿಯ ಬಾಗಿಲು ತೆರೆಯುವ (ತೆರೆಯಿಸುವ) ಹಾಗೂ ಹಾಕುವ (ಹಾಕಿಸುವ) ಕೆಲಸ ಅತ್ಯಂತ ಸುಲಭ. 'ನೀವು ಮನೆಗೆ ಹೊರಡುವಾಗ ನನ್ನ ಅಂಗಡಿ ಮುಚ್ಚಿ ಹೋಗಿ' ಅಥವಾ 'ಎರಡೂವರೆಗೆ ಗಂಟೆಯ ಒಳಗೆ ನಾನು ಬರದೆ, ಇದ್ದರೆ, ನನ್ನ ಅಂಗಡಿಯನ್ನು ತೆರೆದುಬಿಡಿ, ಎಂದು ಇನ್ನೊಬ್ಬ ಸಂಶೊಧಕನಿಗೆ ಸೂಚನೆ ನೀಡಿದರೆ ಸಾಕು (ಆ ಇನ್ನೊಬ್ಬನೂ ಮತ್ತೊಬ್ಬನಿಗೆ, ತನ್ನ ಹಾಗೂ ಮೊದಲನೆಯವನ ಕೊಠಡಿಗಳ ಬೀಗದ ಕೈಗಳನ್ನು ಕೊಟ್ಟು ತಮ್ಮಿಬ್ಬರ ಅಂಗಡಿಗಳನ್ನು ತೆರೆಯಿಸುವ ಅಥವಾ ಮುಚ್ಚಿಸುವ ಸಾಧ್ಯತೆ ಈ ವ್ಯವಸ್ಥೆಯಲ್ಲಿದೆ.) ಹೀಗಾಗಿ ಒಬ್ಬ ಸಂಶೋಧಕನೇ ಹಲವು ಸಂಶೋಧಕರ ಕೆಲಸಗಳನ್ನು ಮ್ಯಾನೆಜ್ ಮಾಡಬಹುದು. ಈ 'ಮ್ಯಾನೆಜ್‌ಮೆಂಟ್' ಎಂಬ ಶಬ್ದಕ್ಕೂ ತನ್ನದೇ ಆದ ಸಂಕೇತಾರ್ಥವುಂಟು 'ರೀ, ಭಟ್ಟರು ಇನ್ನೂ ಬಂದಿಲ್ಲವೆ ?' ಎಂದು ಯಾರಾದರೂ ಕೇಳಿದರೆ, 'ಕ್ಯಾಂಟೀನಿಗೆ/ ಲೈಬ್ರರಿಗೆ ಪ್ರೆಸ್‌ಗೆ ಹೋಗಿದ್ದಾರೆ, ಎಂಬ ಸಲೀಸಾದ ಉತ್ತರ ಕೊಟ್ಟು 'ಮ್ಯಾನೆಜ್' ಮಾಡಬಹುದು.

ಇನ್ನೊಂದು ವಿಶಿಷ್ಟ ಶಬ್ದವೂ ಇದೇ 'ಆತ್ಮ ಪ್ರತಿಷ್ಠಾಪನೆ' 'ಶೆಟ್ಟಿ ಅವರ ಆತ್ಮವನ್ನು ಕಿಣಿ ಪ್ರತಿಷ್ಠಾಪಿಸಿದರು' ಎಂದರೆ ಕಿಣಿ ಅವರು ಶೆಟ್ಟರ ಕೊಠಡಿಯ ಬಾಗಿಲು ತೆರೆದರು ಎಂದಷ್ಟೇ ಅರ್ಥ. ಶೆಟ್ಟರ ಕೋಟು ಹೇಗೂ ಅವರ ಕುರ್ಚಿಯ ಬೆನ್ನಿಗೆ ಅಂಟಿಕೊಂಡಿರುತ್ತದಲ್ಲ !

ಸಂಶೋಧಕರುಗಳು ಈ ಸಂಶೋಧನೆಯಿಂದಾಗಿ, ಮಧ್ಯಾಹ್ನ ಎರಡೂವರೆ ಗಂಟೆಯ ವೇಳೆಗೆ ಎಲ್ಲ ಕೊಠಡಿಗಳಲ್ಲಿನ ಕುರ್ಚಿಗಳೂ 'ತೆರೆದಿದೆ ಮನೆ ಓ......ಬಾ ಎಂದು ಅತಿಥಿಗಳನ್ನು ಸ್ವಾಗತಿಸಲು ಕಾದಿರುತ್ತವೆ.

ಆದರೆ ದುರದೃಷ್ಟ ಕಾಡಿದದಿನ, ಯಾವುದೇ ಬಾಹ್ಯ ವ್ಯವಹಾರವಾಗಲಿ, ಇಲ್ಲದ ಕೆಲವು 'ಸಾಚಾ' ಸಂಶೋಧಕರಿಗೆ, ಇತರ 'ಸ್ಯೂಡೊ' ಸಂಶೋಧಕರುಗಳ ಅಂಗಡಿಗಳನ್ನು ತೆರೆಯುವ ಹಾಗೂ ಮುಚ್ಚುವ ಕಾಯಕವೇ ಆಗಿರುತ್ತದೆ. ಅಂಥ ಮುಗ್ಧರಿಗಾಗಿ ನಮ್ಮ ಸಾರ್ವಕಾಲಿಕ ಸಂತಾಪ ಹಾಗೂ ಅನುಕಂಪಗಳು.

Printed by V.R. NATH for the Publisher M. SHIVAKUMAR, Published and owned by M. SHIVA KUMAR. 36. 6th Main Road, Malleswaram, Bangalore-560 003. Printed at IMPRESSIONS, 404. Sampige Road, Malleswaram, Bangalore-560 003. Editor : M. SHIVAKUMAR.